ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ

## ಗೊಂದಿ ಆಧುನೀಕರಣ ಯೋಜನೆ

# ಜಲ ಧಾರೆ

## ನೀರು, ಪರಿಸರ ಮತ್ತು ಕೃಷಿ ಹಾಡುಗಳು

ಪ್ರಕಟಣೆ :

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಭದ್ರಾ ಕಾಡಾ

ಸ್ಮೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು

ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಒಕ್ಕೂಟ

JALA DHARE – A compilation of songs releted to Water, Environment and Agriculture written by various poets and writers, published by Karnataka Neeravari Nigama Niyamita, Bhadra CADA and SMEC India Pvt. Ltd., Shivamogga under Karnataka Integrated and Sustainable Water Resources Management Investment Program.

ಹಕ್ಕುಗಳು : ಆಯಾ ಕವಿಗಳು ಮತ್ತು ಲೇಖಕರು

ಮೊದಲ ಮುದ್ರಣ : ಆಗಸ್ಟ್ 2019

ಪುಟಗಳು : 52

ಪ್ರತಿಗಳು : 1000

ರಕ್ಷಾಪುಟ ಚಿತ್ರ ಕೃಪೆ : ಅಂತರ್ಜಾಲ

ಮುಖಪುಟ ವಿನ್ಯಾಸ : ಗೌಸ್, ಚಿಕ್ಕನಾಯಕನಹಳ್ಳಿ

ಒಳಪುಟ ವಿನ್ಯಾಸ : ಕಂಪ್ಯೂಕಲರ್ ಆಫ್‌ಸೆಟ್ ಪ್ರಿಂಟರ್ಸ್, ತುಮಕೂರು

ಮುದ್ರಣ : ರೀಗಲ್ ಪ್ರಿಂಟರ್ಸ್, ಬೆಂಗಳೂರು

ಪ್ರಕಟಣೆ : ಕರ್ನಾಟಕ ನೀರಾವರಿ ನಿಗಮ ನಿಯಮಿತ
ಭದ್ರಾ ಕಾಡಾ
ಸ್ಮೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು
ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳ ಒಕ್ಕೂಟ

# ಸಂದೇಶ

ಗೊಂದಿ ನೀರಾವರಿ ಆಧುನೀಕರಣ ಯೋಜನೆಯಲ್ಲಿ ಸಮುದಾಯ ಸಹಭಾಗಿತ್ವಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ನೀರು ಬಳಕೆದಾರ ಸಹಕಾರ ಸಂಘಗಳ ಮೂಲಕವೇ ಹೊಲಗಾಲುವೆಗಳ ಅನುಷ್ಠಾನ ಕಾಮಗಾರಿ ಯಶಸ್ವಿಯಾಗಿ ನಡೆಯುತ್ತಿವೆ. ಜೀವನೋಪಾಯ, ಸುಸ್ಥಿರ ಕೃಷಿ ಉತ್ತೇಜನ, ಭೌಗೋಳಿಕ ಮಾಹಿತಿ ಸಂಗ್ರಹ, ಭೂರಹಿತ ಕುಟುಂಬಗಳಿಗೆ ತರಬೇತಿಗಳು ಇತ್ಯಾದಿ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಯೋಜನೆಯಲ್ಲಿ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲು ಹಾಗೂ ಸುಸ್ಥಿರವಾಗಿ ಮುಂದುವರಿಸಿಕೊಂಡು ಹೋಗಲು ಹಲವು ಸಾಮರ್ಥ್ಯವರ್ಧನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅಲ್ಲದೆ ಯೋಜನೆಯ ಆಶಯ ಹಾಗೂ ಉದ್ದೇಶಗಳನ್ನು ಮನವರಿಕೆ ಮಾಡಿಕೊಡಲು ವಿವಿಧ ರೀತಿಯ ಮಾರ್ಗೋಪಾಯಗಳನ್ನು ಅನುಸರಿಸುತ್ತಿರುವುದು ಯೋಜನೆಯ ವೈಶಿಷ್ಟ್ಯ.

ಈ ಯೋಜನೆಯಲ್ಲಿ ಅರಿವು ಮೂಡಿಸುವ ಸಲುವಾಗಿ ವಿವಿಧ ಸಂವಹನ ಸಾಧನಗಳನ್ನು ಪರಿಣಾಮಕಾರಿಯಾಗಿ ಬಳಸಲಾಗುತ್ತಿದೆ. ಅವುಗಳಲ್ಲಿ ಯಶೋಗಾಥೆಗಳು, ಲೇಖನಗಳು, ಚಿತ್ರಗಳು, ವೀಡಿಯೋ, ರೇಡಿಯೋ ಸಂದರ್ಶನ, ವಾರ್ತಾಪತ್ರ, ಪುಸ್ತಕಗಳು, ಕರಪತ್ರ, ಭಿತ್ತಿಪತ್ರ ಇತ್ಯಾದಿಗಳನ್ನು ಹೆಸರಿಸಬಹುದು. ಪ್ರಸ್ತುತ ಅದರ ಮುಂದುವರಿಕೆಯಾಗಿ 'ಜಲ ಧಾರೆ' ಹೆಸರಿನ ಹಾಡುಗಳ ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ.

ಇದರ ಉಪಯೋಗವನ್ನು ಗೊಂದಿ ಯೋಜನೆಯ ಫಲಾನುಭವಿಗಳು, ಸಂಘಗಳ ಸದಸ್ಯರು ಹಾಗೂ ಇತರರೂ ಸಹ ಪಡೆದುಕೊಳ್ಳಬೇಕಾಗಿ ಮನವಿ.

**ಶ್ರೀ ಜಿ.ಇ. ಯತೀಶ್‌ಚಂದ್ರನ್**
ಮುಖ್ಯ ಇಂಜಿನಿಯರ್
ತುಂಗಾ ಮೇಲ್ದಂಡೆ ಯೋಜನೆ
ಶಿವಮೊಗ್ಗ

# ಮುನ್ನುಡಿ

ಗೊಂದಿ ಆಧುನೀಕರಣ ಯೋಜನೆ ಪ್ರಾರಂಭವಾಗಿ ಮೂರು ವರ್ಷ ದಾಟುತ್ತಿದೆ. ಮುಖ್ಯ ಕಾಲುವೆ ಮತ್ತು ಹೊಲಗಾಲುವೆಗಳ ಆಧುನೀಕರಣ, ಸುಸ್ಥಿರ ಕೃಷಿಗೆ ಉತ್ತೇಜನ, ಜೀವನೋಪಾಯ ಚಟುವಟಿಕೆಗಳಿಗೆ ಆದ್ಯತೆ, ಸಾಮರ್ಥ್ಯ ಬಲವರ್ಧನೆ, ಮಹಿಳಾ ಸಂಘಟನೆ ಇತ್ಯಾದಿ ಅನೇಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಎಲ್ಲಾ ಕೆಲಸಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಹಾಗೂ ಯೋಜನೆಯ ಬಗ್ಗೆ ಅರಿವು ಮೂಡಿಸಲು ಬೀದಿ ನಾಟಕ, ಗೋಡೆ ಬರಹ, ಭಿತ್ತಿ ಪತ್ರಗಳು, ಕೈಪಿಡಿಗಳು, ಕರಪತ್ರಗಳು, ರೇಡಿಯೋ ಸಂದರ್ಶನ, ಪತ್ರಿಕಾ ಲೇಖನಗಳು ಇತ್ಯಾದಿ ಹಲವು ಸಂವಹನ ಸಾಧನಗಳು ಹಾಗೂ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

ಹಾಡುಗಳು ನಮ್ಮ ಗ್ರಾಮೀಣ ಸಮುದಾಯದ ಅವಿಭಾಜ್ಯ ಅಂಗ. ಮದುವೆ ಇತ್ಯಾದಿ ಸಮಾರಂಭಗಳಲ್ಲಿ, ಜಾತ್ರೆಗಳಲ್ಲಿ, ಕೃಷಿ ಕೆಲಸಗಳಾದ ನಾಟಿ ಮಾಡುವುದು, ಕಳೆ ತೆಗೆಯುವುದು, ರಾಗಿ ಬೀಸುವುದು ಇತ್ಯಾದಿ ಸಂದರ್ಭಗಳಲ್ಲಿ ಹಾಡಾಡುತ್ತಲೇ ಕೆಲಸ ಮಾಡುತ್ತಿದ್ದರು. ಶ್ರಮವನ್ನು ಹಗೂರ ಮಾಡಿಕೊಳುತ್ತಿದ್ದರು. ಈ ಪರಂಪರೆ ಈಚಿನ ದಿನಗಳಲ್ಲಿ ಕಡಿಮೆಯಾಗಿದೆಯಾದರೂ ಪೂರ್ಣ ನಶಿಸಿಲ್ಲ. ಗೊಂದಿ ಯೋಜನೆ ಅನುಷ್ಠಾನದ ಸಮಯದಲ್ಲಿ ನಾವು ಸಂಘದ ಸಭೆಗಳು ಹಾಗೂ ಇನ್ನಿತರೆ ಸಂದರ್ಭಗಳಲ್ಲಿ ಹೇಳಿಕೊಡುತ್ತಿದ್ದ ಹಾಡುಗಳನ್ನು ಹಲವಾರು ಹೆಣ್ಣುಮಕ್ಕಳು ಬರೆದುಕೊಳ್ಳುತ್ತಿದ್ದರು. ಅಲ್ಲದೆ ಅದರ ಪ್ರತಿಗಳಿಗೆ ಬೇಡಿಕೆ ಇಟ್ಟಿದ್ದರು. ಇದನ್ನು ಮನಗಂಡು 'ಜಲ ಧಾರೆ' ಹೆಸರಿನ ಹಾಡುಗಳ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

ಈ ಸಂಕಲನದಲ್ಲಿ 34 ಹಾಡುಗಳಿವೆ. ಪ್ರಾರ್ಥನಾ ಗೀತೆಗಳು, ನೀರು, ಪರಿಸರ, ಕೃಷಿ ಮತ್ತು ಇತರೆ ಎಂದು ಐದು ಭಾಗಗಳಲ್ಲಿ ಇವುಗಳನ್ನು ವರ್ಗೀಕರಿಸಲಾಗಿದೆ. ನೀರಿನ ಮಹತ್ವ, ಸಂರಕ್ಷಣೆಯ ಅಗತ್ಯ, ಪರಿಸರದ ಉಳಿವು, ಕೆರೆಕಟ್ಟೆಗಳ ಬಳಕೆ, ಮಹಿಳಾ ಸಬಲೀಕರಣ, ಮಾನವ ಬದುಕಿನ ಸಂಕೀರ್ಣಗಳ ಕುರಿತು ಈ ಮಾಧುರ್ಯಭರಿತ ಹಾಡುಗಳು ವರ್ಣಿಸುತ್ತವೆ.


ಈ ಹಾಡುಗಳನ್ನು ನೀರು ಬಳಕೆದಾರರ ಸಹಕಾರ ಸಂಘಗಳು, ಮಹಿಳಾ ಉಪಸಮಿತಿಗಳು, ಗೊಂದಿ ಒಕ್ಕೂಟದ ಸಭೆಗಳಲ್ಲಿ, ವಿವಿಧ ತರಬೇತಿ, ಕಾರ್ಯಾಗಾರ ಹಾಗೂ ಸಂವಾದಗಳಲ್ಲಿ, ಕ್ಷೇತ್ರೋತ್ಸವಗಳಲ್ಲಿ, ಜಾಥಾ, ಬೀದಿನಾಟಕ ಮತ್ತು ಇತರೆ ಸಂದರ್ಭಗಳಲ್ಲಿ ಹಾಡಬಹುದು. ಮಕ್ಕಳಿಗೂ ಕಲಿಸಬಹುದು.

ಈ ಪುಸ್ತಕದಲ್ಲಿ ಅಡಕವಾಗಿರುವ ಕವನ ಹಾಗೂ ಹಾಡುಗಳನ್ನು ನಾಡಿನ

ಹಲವು ಪ್ರಸಿದ್ಧ ಕವಿಗಳು, ಕವಿಯತ್ರಿಗಳು ಹಾಗೂ ಲೇಖಕರು ರಚಿಸಿದ್ದಾರೆ. ಕೃಷಿಕ ಹೆಣ್ಣುಮಕ್ಕಳಿಗೆ ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಉಪಯೋಗವಾಗುವ ದೃಷ್ಟಿಯಿಂದ ಅವುಗಳನ್ನು ಇಲ್ಲಿ ಸೇರಿಸಲಾಗಿದೆ. ಇದರಲ್ಲಿ ಯಾವುದೇ ಲಾಭದ ಉದ್ದೇಶವಿರುವುದಿಲ್ಲ. ಆ ಎಲ್ಲಾ ಕವಿಗಳು ಹಾಗೂ ಲೇಖಕರಿಗೆ ಮನಃಪೂರ್ವಕ ಧನ್ಯವಾದಗಳು. ಪುಸ್ತಕದಲ್ಲಿರುವ ಕೆಲವು ಹಾಡುಗಳನ್ನು ನಮ್ಮ ಮಹಿಳಾ ಉಪಸಮಿತಿ ಸದಸ್ಯರು ರಚಿಸಿದ್ದಾರೆ. ಅವರಿಗೆ ವಿಶೇಷ ವಂದನೆಗಳು.

ಪುಸ್ತಕಕ್ಕೆ ಅಂದವಾದ ಮುಖಪುಟ ರಚಿಸಿದ ಕಲಾವಿದ ಗೌಸ್, ಒಳಪುಟಗಳನ್ನು ವಿನ್ಯಾಸ ಮಾಡಿದ ಕಂಪ್ಯುಕಲರ್ ಆಫ್‌ಸೆಟ್ ಪ್ರಿಂಟರ್ಸ್, ಅರ್ಥಪೂರ್ಣ ರೇಖಾ ಚಿತ್ರಗಳನ್ನು ಬರೆದುಕೊಟ್ಟ ಚಿತ್ರ ಕಲಾವಿದ ನಾಮದೇವ ಕಾಗದಗಾರ ಅವರಿಗೆ ವಂದನೆಗಳು. ಪುಸ್ತಕದ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ನೀರಾವರಿ ನಿಗಮ, ಭದ್ರಾ ಕಾಡಾ, ಗೊಂದಿ ಒಕ್ಕೂಟ ಹಾಗೂ ಎಲ್ಲಾ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಧನ್ಯವಾದಗಳು. ಕೊನೆಯದಾಗಿ ಹಾಡುಗಳ ಸಂಗ್ರಹ, ಆಯ್ಕೆ, ವಿನ್ಯಾಸ ಮತ್ತು ಮುದ್ರಣ ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಸ್ಮೆಕ್ ಸಂಸ್ಥೆಯ ಸಿಬ್ಬಂದಿಗಳಿಗೆ ಅಭಿನಂದನೆಗಳು.

**ಡಾ. ಶ್ರೀನಿವಾಸ ಮುದ್ರಕರ್ತ,** ತಂಡದ ಉಪನಾಯಕರು
ಸ್ಮೆಕ್ ಯೋಜನಾ ಸಹಾಯ ಸಂಸ್ಥೆ



# ಪರಿವಿಡಿ


| | | | |
|---|---|---|---|
| ಸಂದೇಶ | : | ಜಿ.ಇ. ಯತೀಶ್‌ಚಂದ್ರನ್ | 3 |
| ಮುನ್ನುಡಿ | : | ಡಾ. ಶ್ರೀನಿವಾಸ್ ಮುದ್ರಕರ್ತ | 4 |

**ಭಾಗ 1 – ಪ್ರಾರ್ಥನಾ ಗೀತೆಗಳು**

| | | | |
|---|---|---|---|
| 1. ರಾಷ್ಟ್ರ ಗೀತೆ | : | ರವೀಂದ್ರನಾಥ ಠ್ಯಾಗೋರ್ | 10 |
| 2. ನಾಡ ಗೀತೆ | : | ಕುವೆಂಪು | 11 |
| 3. ರೈತ ಗೀತೆ | : | ಕುವೆಂಪು | 12 |
| 4. ನಿತ್ಯೋತ್ಸವ | : | ಕೆ.ಎಸ್. ನಿಸಾರ ಅಹಮದ್ | 13 |
| 5. ತಂದೆ ನೀ ನೀಡು ಬಾ | : | ಆರ್.ಎನ್. ಜಯಗೋಪಾಲ್ | 14 |
| 6. ಕಲಿಸು ಗುರುವೇ ಕಲಿಸು | : | :ಅಬ್ರಹಾಂ ಲಿಂಕನ್ | 15 |

**ಭಾಗ 2 – ನೀರು**

| | | | |
|---|---|---|---|
| 7. ಶರಣಯ್ಯ ಶರಣು | : | ಕೋಟಿಗಾನಹಳ್ಳಿ ರಾಮಯ್ಯ | 18 |
| 8. ನೀರೆಂಬುದು | : | ರಾಜಪ್ಪ ದಳವಾಯಿ | 19 |
| 9. ಮಳೆರಾಯ ಓ ಮಳೆರಾಯ | : | ಜಾನಪದ | 20 |
| 10. ನಮ್ಮ ಗೊಂದಿ | : | ರಾಧಾಮಣಿ | 21 |
| 11. ಗೊಂದಿಯ ನಾಲೆ ಬಂದೈತೆ | : | ವೀರೇಶ್ ಯರಬಾಳು | 22 |
| 12. ಕೆರೆಯೊಂದಿರಬೇಕೋ ತಮ್ಮ | : | ಇಟಗಿ ಈರಣ್ಣ | 23 |
| 13. ನೀರನು ಸುರಿವರು ಯಾರಣ್ಣ | : | ಅನಾಮಿಕ | 24 |
| 14. ಊರ ಮುಂದ ಕೆರೆ ಚಂದ | : | ಅನಾಮಿಕ | 25 |

**ಭಾಗ 3 – ಪರಿಸರ**

| | | | |
|---|---|---|---|
| 15. ನಮೋಃ ನಮೋಃ ಭೂಮಿ ತಾಯಿ | : | ಕೆಂಪೇಗೌಡ ನಾಗಮಂಗಲ | 28 |
| 16. ಎಲ್ಲಿ ಹೋದವೋ | : | ಗೊಲ್ಲಹಳ್ಳಿ ಶಿವಪ್ರಸಾದ್ | 29 |
| 17. ಹಸಿರು ಹಾದಿಯಲಿ | : | ಜನಾರ್ಧನ ಕೆಸರಗದ್ದೆ | 30 |
| 18. ಎಲ್ಲಾ ಮಾಯ | : | ಗೊಲ್ಲಹಳ್ಳಿ ಶಿವಪ್ರಸಾದ್ | 31 |
| 19. ಮೆರವಣಿಗೆ | : | ಡಾ. ವಿನಯಾ ವಕ್ಕುಂದ | 33 |
| 20. ಬಿದಿರು | : | ಸಂತ ಶಿಶುನಾಳ ಷರೀಫ | 34 |

| | | | |
|---|---|---|---|
| 21. ಸೃಷ್ಟಿಯ ಚಲನ | : | ಅನಾಮಿಕ | 35 |
| 22. ಅಡವಿ ತಾಯಿ | : | ಕೋಟಿಗಾನಹಳ್ಳಿ ರಾಮಯ್ಯ | 36 |

**ಭಾಗ 4 – ಕೃಷಿ**

| | | | |
|---|---|---|---|
| 23. ರೈತನ ಮಗಳು | : | ಹಿ.ಶಿ. ರಾಮಚಂದ್ರಗೌಡ | 38 |
| 24. ಮಣ್ಣ ಮಾತು | : | ವೀರೇಶ್ ಯರಬಾಳು | 39 |
| 25. ಊರಿಗೆ ಮಳೆ ಬಂತು | : | ಜಾನಪದ | 40 |
| 26. ನವಣೆ ಹಾಡು | : | ಜಾನಪದ | 41 |
| 27. ಮಂಕಾಗದಿರಲಿ ನಮ್ಮ ಬದುಕು | : | ಕೆಂಪೇಗೌಡ ನಾಗಮಂಗಲ | 42 |
| 28. ನಾವು ಕೂಡ ಗೆಲ್ಲುವೆವು | : | ಗ್ರಾಮೀಣ ಮಹಿಳಾ ಒಕ್ಕೂಟ | 43 |

**ಭಾಗ 5 – ಇತರೆ**

| | | | |
|---|---|---|---|
| 29. ಹಸಿರು ಕಡ್ಡಿಯ ಸೀರೆ | : | ಜಾನಪದ | 46 |
| 30. ಯಾರ ಹೊಲ ಯಾರ ಮನೆ | : | ಜಾನಪದ | 47 |
| 31. ಕಾಡು ಕುದುರೆ ಓಡಿ ಬಂದಿತ್ತಾ | : | ಡಾ. ಚಂದ್ರಶೇಖರ ಕಂಬಾರ | 48 |
| 32. ಕಟ್ಟುತ್ತೇವೆ | : | ಸತೀಶ್ ಕುಲಕರ್ಣಿ | 49 |
| 33. ಜಜ್ಜಣಕು ಜಣಾರೆ | : | ಅನಾಮಿಕ | 50 |
| 34. ಮುದ್ದು ಮಾದಯ್ಯ | : | ಜಾನಪದ | 51 |

ಭಾಗ 1

# ಪ್ರಾರ್ಥನಾ ಗೀತೆಗಳು

# ರಾಷ್ಟ್ರ ಗೀತೆ

ಜನ ಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿ ತರಂಗ
ತವ ಶುಭ ನಾಮೇ ಜಾಗೇ
ತವ ಶುಭ ಆಶಿಶ ಮಾಗೇ
ಗಾಹೇ ತವ ಜಯ ಗಾಥಾ
ಜನ ಗಣ ಮನ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

– **ರವೀಂದ್ರನಾಥ ಠಾಗೂರ್**

# ನಾಡ ಗೀತೆ

ಜೈ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ

ಜಯ ಸುಂದರ ನದಿವನಗಳ ನಾಡೆ । ಜಯಹೇ ರಸ ಋಷಿಗಳ ಬೀಡೆ
ಭೂದೇವಿಯ ಮುಕುಟದ ನವಮಣಿಯೇ । ಗಂಧದ ಚೆಂದದ ಹೊನ್ನಿನ ಗಣಿಯೇ
ರಾಘವ ಮಧುಸೂದನರವತರಿಸಿದ ॥ ಪ ॥

ಜನನಿಯ ಜೋಗುಳ ವೇದದ ಘೋಷ । ಜನನಿಗೆ ಜೀವವು ನಿನ್ನಾವೇಶ
ಹಸುರಿನ ಗಿರಿಗಳ ಸಾಲೆ । ನಿನ್ನಯ ಕೊರಳಿನ ಮಾಲೆ
ಕಪಿಲ ಪತಂಜಲ ಗೌತಮ ಜಿನನುತ ॥ ಪ ॥

ಶಂಕರ ರಾಮಾನುಜ ವಿದ್ಯಾರಣ್ಯ । ಬಸವೇಶ್ವರ ಮಧ್ವರ ದಿವ್ಯಾರಣ್ಯ
ರನ್ನ ಷಡಕ್ಷರ ಪೊನ್ನ । ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ । ಕವಿಕೋಗಿಲೆಗಳ ಪುಣ್ಯಾರಾಮ
ನಾನಕ ರಾಮಾನಂದ ಕಬೀರರ ॥ ಪ ॥

ತೈಲಪ ಹೊಯ್ಸಳರಾಳಿದ ನಾಡೆ । ಡಂಕಣ ಜಕಣರ ನೆಚ್ಚಿನ ಬೀಡೆ
ಕೃಷ್ಣ ಶರಾವತಿ ತುಂಗಾ । ಕಾವೇರಿಯ ವರರಂಗ
ಚೈತನ್ಯ ಪರಮಹಂಸ ವಿವೇಕರ ॥ ಪ ॥

ಸರ್ವ ಜನಾಂಗದ ಶಾಂತಿಯ ತೋಟ । ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ ಕ್ರೈಸ್ತ ಮುಸಲ್ಮಾನ । ಪಾರಸಿಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ । ಗಾಯಕ ವೈಣಿಕರಾರಾಮ
ಕನ್ನಡ ನುಡಿ ಕುಣಿದಾಡುವ ಗೇಹ । ಕನ್ನಡ ತಾಯಿಯ ಮಕ್ಕಳ ದೇಹ ॥ ಪ ॥

**– ಕುವೆಂಪು**

**ನೂರು ವರ್ಷಗಳ ನಂತರ ಪುನಶ್ಚೇತನಗೊಂಡಿರುವ**
**ಗೊಂದಿ ಕಾಲುವೆಗಳ ನಿರ್ವಹಣೆ ನಮ್ಮ ಜವಾಬ್ದಾರಿ**


# ರೈತ ಗೀತೆ

ನೇಗಿಲ ಹಿಡಿದು ಹೊಲದೊಳು ಹಾಡುತ ಉಳುವ ಯೋಗಿಯ ನೋಡಲ್ಲಿ
ಫಲವನು ಬಯಸದ ಸೇವೆಯೆ ಪೂಜೆಯು ಕರ್ಮವೆ ಇಹಪರ ಸಾಧನವೂ
ಕಷ್ಟದೊಳನ್ನವ ದುಡಿವನೆ ತ್ಯಾಗೀ... ಸೃಷ್ಟಿ ನಿಯಮದೊಳು ಅವನೇ ಭೋಗಿ
ಉಳುವ ಯೋಗಿಯ ನೋಡಲ್ಲಿ ಉಳುವ ಯೊಗಿಯ ನೋಡಲ್ಲಿ

ಲೋಕದೊಳೇನೇ ನಡೆಯುತಲಿರಲಿ ತನ್ನೀ ಕಾಯಕ ಬಿಡನೆಂದು
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ ಹಾರಲಿ ಗದ್ದುಗೆ ಮುಕುಟಗಳು
ಮುತ್ತಿಗೆ ಹಾಕಲಿ ಸೈನಿಕರೆಲ್ಲಾ ಬಿತ್ತುವುದನವ ಬಿಡುವುದೆ ಇಲ್ಲ
ಉಳುವ ಯೋಗಿಯ ನೋಡಲ್ಲಿ ಉಳುವ ಯೊಗಿಯ ನೋಡಲ್ಲಿ

ಯಾರು ಅರಿಯದ ನೇಗಿಲ ಯೋಗಿಯೆ ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖ ಗಳಿಸದೆ ದುಡಿವನು ಗೌರವಕಾಶಿಸದೆ
ನೇಗಿಲ ಕುಲದೊಳು ಅಡಗಿದೆ ಕರ್ಮ ನೇಗಿಲ ಮೇಲೆಯೆ ನಿಂತಿದೆ ಧರ್ಮ
ಉಳುವ ಯೋಗಿಯ ನೋಡಲ್ಲಿ ಉಳುವ ಯೋಗಿಯ ನೋಡಲ್ಲಿ

– **ಕುವೆಂಪು**



# ನಿತ್ಯೋತ್ಸವ

ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ

ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ
ಓಲೆ ಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ ತಾಯಿ, ನಿತ್ಯೋತ್ಸವ ನಿನಗೆ

ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ
ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೆ
ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ

**– ಕೆ.ಎಸ್.ನಿಸಾರ್ ಅಹಮದ್**



# ತಂದೆ ನೀ ನೀಡು ಬಾ

ತಂದೆ ನೀ ನೀಡು ಬಾ, ಶಕ್ತಿ ಮನಸಿಗೆ
ಜ್ಯೋತಿ ನೀನಾಗು ಬಾ, ಬಾಳ ಇರುಳಿಗೆ
ನಮ್ಮ ಅಜ್ಞಾನ ನೀ ನೀಗು ಬಾ
ಬಾಳ ಹಾದಿಗೆ ಗುರಿ ತೋರು ಬಾ

ನಮ್ಮ ಮನದಿಂ ದೌರ್ಬಲ್ಯ ದೂಡು
ಸತ್ಯ ಪಥದಲ್ಲಿ ನಡೆವಂತೆ ಮಾಡು
ಕಷ್ಟ ನೂರಾರು ನೀ ಪಾರು ಮಾಡು
ನಿತ್ಯ ಸಂತೋಷ ನಮಗೆಂದು ನೀಡು
ಪ್ರೇಮ ಹೂವಾಗಲಿ, ದ್ವೇಷ ದೂರಾಗಲಿ
ಸೇಡ ವಿಷ ಜ್ವಾಲೆ ಮನದಲ್ಲಿ ಕೊನೆಯಾಗಲಿ

ಎಂಥ ಬಿರುಗಾಳಿ ಎದುರಾದರೇನು
ನಿಂತು ತಡೆವಂಥ ಛಲ ನೀಡು ಎಂದು
ನಮ್ಮ ಸಂತೋಷ ಪರರಲ್ಲಿ ಹಂಚಿ
ನಾವು ನಲಿವಂತೆ ಮನ ನೀಡು ಎಂದು
ದ್ರೋಹ ದೂರಾಗಲಿ, ಸ್ನೇಹ ಹೊಳೆಯಾಗಿಲಿ
ಸ್ವಾರ್ಥ ಮನದಿಂದ ಎಂದೆಂದೂ ಕೊನೆಯಾಗಲಿ

**– ಆರ್.ಎನ್. ಜಯಗೋಪಾಲ್**

# ಕಲಿಸು ಗುರುವೇ ಕಲಿಸು

ಕಲಿಸು ಗುರುವೇ ಕಲಿಸು, ಕಲಿಸು ಸದ್ಗುರುವೇ ನೀ ಕಲಿಸು
ಸುಳ್ಳಿನ ನಡುವೆ ನಾ ಸತ್ಯವನಾಡಲು ಕಲಿಸು
ಸ್ವಾರ್ಥದ ನಡುವೆ ನಿಸ್ವಾರ್ಥಿಯಾಗಲು ಕಲಿಸು
ಅಂಜಿ ನಡೆವರ ನಡುವೆ ಧೀರನಾಗಲು ಕಲಿಸು
ಧರೆಯ ದುಷ್ಟರ ನಡುವೆ ಜಾಣನಾಗಲು ಕಲಿಸು ॥ ಕಲಿಸು ॥

ಬೆವರಿಳಿಸಿ ಗಳಿಸಿದ ಒಂದು ಕಾಸು
ಸಿಕ್ಕ ಹತ್ತಕ್ಕಿಂತ ಮಿಗಿಲೆಂಬುದ ಕಲಿಸು
ಸೋಲು ಗೆಲುವಿನಲಿ ಸಮಚಿತ್ತದಿಂದಿರಲು
ಶತ್ರುಗಳಿಗೂ ಸನ್ಮಿತ್ರನಾಗಿರಲು ಕಲಿಸು
ಹಸಿರು ಮಲೆ ಹೂವಿನಲಿ ನಾ ಧ್ಯಾನಿಸುವುದ ಕಲಿಸು
ಜಾಣನಾಗಲು ಕಲಿಸು ॥ ಕಲಿಸು ॥

ಜಗವೆಲ್ಲಾ ಒಂದಾಗಿ ಜರಿದರೂ ಸರಿಯೇ
ನನ್ನನ್ನೇ ನಾ ನಂಬುವ ಬಗೆ ನೀ ಕಲಿಸು
ಅಳುವಿನಲಿ ಅವಮಾನ ಇಲ್ಲೆಂಬುದ ಕಲಿಸು
ನನ್ನನ್ನೇ ನಾ ನೋಡಿ ನಗುವುದನು ಕಲಿಸು
ಮಾನವೀಯತೆಯಲಿ ನಾ ಮರುಗುವದನು ಕಲಿಸು
ಮಾನವೀಯತೆಯಲಿ ನಾ ಕರಗುವುದನು ಕಲಿಸು
ಜಾಣನಾಗಲು ಕಲಿಸು ॥ ಕಲಿಸು ॥

ಇಂಗ್ಲಿಷ್ ಮೂಲ : **ಅಬ್ರಹಾಂ ಲಿಂಕನ್**
ಕನ್ನಡಕ್ಕೆ : **ರಾಮನಾಥ್**

ಭಾಗ 2

# ನೀರು

# ಶರಣಯ್ಯ ಶರಣು

ಶರಣಯ್ಯ... ಶರಣು... ಶರಣು
ಶರಣಯ್ಯ ಶರಣು ಶರಣಯ್ಯ ಶರಣು
ಶರಣಯ್ಯ ಶರಣು ಶರಣಯ್ಯ ಶರಣು

ಊರೂರಿಗೊಂದೊಂದು ಕೆರೆಕಟ್ಟೆ ಕಟ್ಟಿದ
ಕಟ್ಟೆಯ ಮೇಲೊಂದು ಅತ್ತಿಯ ಮರ ನೆಟ್ಟ
ಆ ಹಿರಿಯರ ಪಾದಕ್ಕೆ ಶರಣು
ಅವರು ಮುಟ್ಟಿದ ಮಣ್ಣಿಗೆ ಶರಣು

ದಾರಿ ಹೋಕರಿಗೆಂದು ಅರವಂಟಿಗೆ ಇಟ್ಟ
ನಡೆವಾಗ ನೆರಳಿರಲು ಸಾಲು ಮರಗಳ ನೆಟ್ಟ
ಆ ಹಾಲಂತ ಮನಸ್ಸಿಗೆ ಶರಣು
ಅವರ ನೆರಳಂತ ನೆನಪಿಗೆ ಶರಣು

ದನಕರು ಕುಡಿಯೋಕೆ ಗೋಕುಂಟೆ ಕಟ್ಟಿದ
ಗೋಕುಂಟೆ ಬಳಿಯೊಂದು ಗೋಕಲ್ಲು ನೆಟ್ಟ
ಆ ಕರುಣೆಯ ಕಣ್ಣಿಗೆ ಶರಣು
ಆ ದೀವಟಿಗೆ ಬೆಳಕಿಗೆ ಶರಣು

**– ಕೋಟಿಗಾನಹಳ್ಳಿ ರಾಮಯ್ಯ**



# ನೀರೆಂಬುದು

ನೀರೆಂಬುದು ಬಯಸಿದಾಗಲೆಲ್ಲಾ ಸಿಗುವ ಮಾಯಾವಸ್ತುವಲ್ಲ
ಬೇಕಾಬಿಟ್ಟಿ ಬಳಸಿದರೆ ಕುಡಿಯಲು ನೀರಿರದೆ
ಮಣ್ಣಾಗಿ ಹೋಗುವೆವಣ್ಣಾ ನಾವು ಮಣ್ಣಾಗಿ ಹೋಗುವೆವಣ್ಣ


ಭೂತಾಯಿಯ ಕೊರೆಕೊರೆದು ಜಲದ ಕಣ್ಣ ಸೆಳೆದು
ಅಂತರ್ಜಲ ಬತ್ತಿಸಿದೆವಣ್ಣಾ ನಾವು ಅಂತರ್ಜಲ ಬತ್ತಿಸಿದೆವಣ್ಣ
ನೀರೆಂಬುದು ಬಯಸಿದಾಗಲೆಲ್ಲಾ ಸಿಗುವ ಮಾಯಾವಸ್ತುವಲ್ಲ

ಮುಗಿಲಿಂದ ಬಂದ ಭಾಗ್ಯ ಕೂಡಿಡಲಿಲ್ಲ ನಾವ್ ಅಯೋಗ್ಯ
ಕೆರೆಬಾವಿ ಮರೆತೇವಣ್ಣಾ ನಾವು ಕೆರೆಬಾವಿ ಮರೆತೇವಣ್ಣ
ನೀರೆಂಬುದು ಬಯಸಿದಾಗಲೆಲ್ಲಾ ಸಿಗುವ ಮಾಯಾವಸ್ತುವಲ್ಲ

ಕೈಲಿದ್ದ ನೀರನ್ನು ಜಂಭ ಮಾಡಿ ಕಳೆದೆವು
ನೀರಿರದೆ ಹೊಲ ಉತ್ತರೇನಣ್ಣಾ ನಾವು ನೀರಿರದೆ ಹೊಲ ಉತ್ತರೇನಣ್ಣ
ನೀರೆಂಬುದು ಬಯಸಿದಾಗಲೆಲ್ಲಾ ಸಿಗುವ ಮಾಯಾವಸ್ತುವಲ್ಲ

ಮಳೆ ನೀರ ಹಿಂಗಿಸು ನೀ ಮಿತವಾಗಿ ಬಳಸು
ಕೆರೆಬಾವಿಕಟ್ಟೆಗಳೇ ಸಂಪತ್ತಣ್ಣಾ ನಮಗೆ ಕೆರೆಬಾವಿಕಟ್ಟೆಗಳೇ ಸಂಪತ್ತಣ್ಣ
ನೀರೆಂಬುದು ಬಯಸಿದಾಗಲೆಲ್ಲಾ ಸಿಗುವ ಮಾಯಾವಸ್ತುವಲ್ಲ

**– ರಾಜಪ್ಪ ದಳವಾಯಿ**




# ಮಳೆರಾಯ ಓ ಮಳೆರಾಯ

ಮಳೆರಾಯ ಓ ಮಳೆರಾಯ
ಮಳೆರಾಯ ಮಳೆರಾಯ ಹೊನ್ನ ಸುರ್ಸೋ
ಭೂಮ್ತಾಯಿ ಭೂಮ್ತಾಯಿ ಬಂಗಾರ್ ಬೆಳ್ಸಿ
ತಂದಾನಿ ತಂದನಾನೋ ತಂದಾನಿ ತಂದನಾನೋ

ಮುತ್ತಿನಂತೆ ಓಲಾಡ್ಲಿ ರಾಗಿ ತೆನೆ
ಬಂಗಾರ್ದಂತೆ ಬೆಳೆಯಲಿ ಭತ್ತದ್ ತೆನೆ
ಬೆಳ್ಳಿ ಮೋಡದಂಗೆ ತೇಲಾಡ್ಲಿ ಹಾಲಿನ್ ಕೆನೆ
ಹರುಷದಿಂದ ತುಳುಕಾಡ್ಲಿ ನಮ್ಮ ಮನೆ ॥ ತಂದಾನಿ॥

ಹಿಂಗಾರು ಮುಂಗಾರು ಮಳೆ ಬಂದು
ನಮ್ಮೂರ ಕೆರೆಕಟ್ಟೆ ತುಂಬಿ ನಿಂದು
ಬಲು ಸಿಂಗಾರ ಭೂಮ್ತಾಯಿ ನಿನಗಿಂದು
ಮಂದಾರ ಶಿರಪುಷ್ಪ ಅರಳಿ ನಿಂದು ॥ ತಂದಾನಿ॥

– **ಜಾನಪದ**



# ನಮ್ಮ ಗೊಂದಿ

ಏನು ಅಂದ ಎಂತಾ ಚೆಂದ ಗೊಂದಿ ಯೋಜನೆ
ಕಳೆಯಿತು ನಮ್ಮ ಹಳ್ಳಿಗಳಿಗೆ ನೀರಿನ ಯೋಚನೆ

ಕಾಮಗಾರಿ ಮಾಡಿದ ಮೇಲೆ ಕಾಲುವೆ ಚೆಂದವೋ
ಗೊಂದಿ ರೈತರ ಮೊಗದಲಿ ನೆಮ್ಮದಿ ತಂದಾವೋ

ರೈತರೇ ಸೇರಿ ಯೋಜನೆ ಮಾಡಿ ನೀರನು ಬಿಡುತಾರೇ
ಭತ್ತ ಕಬ್ಬು ಅಡಿಕೆ ಜೋಳ ಬೆಳೆಯ ಬೆಳಿತಾರೆ

ವರ್ಷ ಪೂರ್ತಿ ಭದ್ರಾ ನದಿಯು ತುಂಬಿ ಹರಿಯಾಲಿ
ನೂರು ವರ್ಷದ ಗೊಂದಿ ಕಾಲುವೆ ಹೀಗೇ ಉಳಿಯಲಿ

ಗೊಂದಿ ಮಹಿಳೆಯರೆಲ್ಲಾ ಕೂಡಿ ಬಾಗಿನ ಬಿಡುತಾರೆ
ಮಕ್ಕಳು ಮರಿಗಳು ಎಲ್ಲಾ ಸೇರಿ ಸುಗ್ಗಿ ಮಾಡ್ತಾರೆ

ಏನು ಅಂದ ಎಂತಾ ಚೆಂದ ಗೊಂದಿ ಯೋಜನೆ
ಕಳೆಯಿತು ನಮ್ಮ ಹಳ್ಳಿಗಳಿಗೆ ನೀರಿನ ಯೋಚನೆ

– **ರಾಧಾಮಣಿ,** ದೊಡ್ಡಗೊಪ್ಪೇನಹಳ್ಳಿ



**ಗೊಂದಿ ಕಾಲುವೆ ಸಮುದಾಯದ ಆಸ್ತಿ, ಉಳಿಸಲು ಸರ್ವರೂ ಕೈಜೋಡಿಸಿ**

# ಗೊಂದಿಯ ನಾಲೆ ಬಂದ್ಯೆತೆ

ಗೊಂದಿಯ ನಾಲೆ ಬಂದ್ಯೆತೆ ಕೈತುಂಬಾ ನೀರು ತಂದ್ಯೆತೆ
ದುಡಿವಂತ ರೈತರಿಗೆ ಹಿರಿ ಹಿರಿ ಹಿಗ್ಗುವ ಕಾಲ
ಬೆಳೆಯೋಣಾ ಗದ್ದೆ ಭತ್ತವಾ ಮಾಡೋಣಾ ಸುಗ್ಗಿ ಹಬ್ಬವಾ

ಸುಗ್ಗಿಯ ಕಾಲ ಬಂದ್ಯೆತೆ ಹಬ್ಬದ ಸೊಬಗು ತಂದ್ಯೆತೆ
ಹಳ್ಳಿಯಾ ಜನರೆಲ್ಲಾ ಒಂದಾಗಿ ಸೇರುವ ಕಾಲ
ಬಾರಣ್ಣ ರಾಶಿ ಪೂಜೆಗೆ, ಮಾಡೋಣಾ ಸಹಭೋಜನ

# ಗೊಂದಿ ಯೋಜನೆ

ಏನು ಯೋಜನೆ ಎಂಥ ಯೋಜನೆ ಗೊಂದಿ ಯೋಜನೆ
ಎಂಥಾ ಚೆಂದುಳ್ಳ ಯೋಜನೆ ಗೊಂದಿ ಯೋಜನೆ
ಎಂಥಾ ಚೆಂದುಳ್ಳ ಯೋಜನೆ

ರೈತರು ಮಹಿಳೆಯರೆಲ್ಲರು ಸೇರಿ ಸಭೆಯ ಮಾಡೋಣ
ಕಾಲುವೆ ನೀರಿನ ರಕ್ಷಣೆ ಬಗ್ಗೆ ಯೋಜನೆ ಮಾಡೋಣ ॥ ಏನು ॥

ಕಡಿಮೆ ಖರ್ಚಿನ ಕೃಷಿಯಾ ಮಾಡಲು ಮಾಹಿತಿ ಪಡೆಯೋಣ
ಸುಸ್ಥಿರ ಕೃಷಿ ಅಭಿವೃದ್ಧಿಗೆ ಕಾಳಜಿ ವಹಿಸೋಣ ॥ ಏನು ॥

ಅಂತರ್ಜಲ ಮಟ್ಟ ಹೆಚ್ಚಿಸೋಣ ನೀರಿನ ಬವಣೆ ತಪ್ಪಿಸೋಣ
ಗೊಂದಿ ರೈತರೆ ಸೇರಿಕೊಂಡು ಒಕ್ಕೂಟ ಮಾಡೋಣ ॥ ಏನು ॥

– ವೀರೇಶ್ ಯರಬಾಳು



# ಕೆರೆಯೊಂದಿರಬೇಕೋ ತಮ್ಮ

ಕೆರೆಯೊಂದಿರಬೇಕೋ ತಮ್ಮಾ ಕೆರೆಯೊಂದಿರಬೇಕು।
ಊರೂರಿಗೂ ಒಂದು, ಪ್ರತಿ ಊರಿನ ಮುಂದು ॥ ಕೆರೆ ॥


ತಗ್ಗು ಇದ್ದಲ್ಲಿ ನೀರು ನುಗ್ಗಿ ಬರುತಾದೋ
ನುಗ್ಗಿ ಬರುತಾದೋ ನೀರು ಸುಗ್ಗಿ ತರುತಾದೋ
ಸುಗ್ಗಿ ತರಲೆಂದು ನೀರು ನುಗ್ಗಿ ಬರಲೆಂದು ॥ ಕೆರೆ ॥

ತಗ್ಗು ತೆಗೆತೆಗೆದು, ನೀನು ಹಿಗ್ಗಿಸು ಕೆರೆ ಆಳ
ಹಿಗ್ಗಿಸು ಕೆರೆ ಆಳ, ನುಗ್ಗಿ ತೆಗೆಸು ಕೆರೆ ಹೂಳ
ಹಿಗ್ಗು ಇರಲೆಂದು ಹಿಗ್ಗು ಊರಿಗೆ ಬರಲೆಂದು ॥ ಕೆರೆ ॥

ಅಂತರಜಲ ಹೆಚ್ಚಿ ಭೂಮಿ ತಂಪು ಇರುತಾದೋ
ಸಂತಸ ಹಸಿರುಕ್ಕಿ ಊರು ತಂಪು ಇರುತಾದೋ
ತಂಪಾಗಿರಲೆಂದು ಊರು ಸೊಂಪಾಗಿ ಇರಲೆಂದು ॥ ಕೆರೆ ॥

ಊರಿನ ಗಿಡಗೆಂಟೆ ಭಾರಿ ಹೂ ಹಣ್ಣು ಬಿಡುತಾವೋ
ಊರಿನ ಹೊಲಗದ್ದೆ, ಭಾರಿ ಬೆಳೆಯ ಕೊಡುತಾವೋ
ಧಗೆಯು ಬೇಡೆಂದು ಊರಿಗೆ ನಗೆಯು ಇರಲೆಂದು ॥ ಕೆರೆ ॥

– ಇಟಗಿ ಈರಣ್ಣ



# ನೀರನು ಸುರಿವರು ಯಾರಣ್ಣ?

ಮುಗಿಲೊಳಗಿಂದ ಭೂಮಿಯ ಮೇಲೆ
ನೀರನು ಸುರಿವರು ಯಾರಣ್ಣ?
ಮುಗಿಲನ ಮರೆಗೆ ಯಾರೂ ಇಲ್ಲ
ಸುರಿವುದು ನೀರು ಹೇಗಣ್ಣ

ಆಗಸದಿಂದ ಭೂಮಿಗೆ ನೀರು
ಬೀಳುವ ಬಗೆಯ ಹೇಳುವೆ ತಮ್ಮಾ
ಭೂಮಿಯ ಮೇಲೆ ನೀರಿನ ಮೂಲ
ಕೆರೆ ಹೊಳೆ ಹಳ್ಳ ಸಾಗರ ತಮ್ಮಾ

ಸೂರ್ಯನ ಬಿಸಿಲೆಗೆ ಕಾಯುತ ಉಗಿಯ
ರೂಪದಿ ಮೇಲಕೆ ಹೋಗುವುದು
ಜಲದಾ ಉಗಿಯು ಒಂದೆಡೆ ಸೇರಿ
ಮೋಡಗಳಾಗಿ ತೇಲುವುದು

ತಣ್ಣನೆ ಗಾಳಿ ಬಾನಿಗೆ ತಾಗಿ
ಕರಗುತ ಕೂಡಲೆ ನೀರಾಗುವುದು
ಮಂಜಿನ ಗಡ್ಡ ಕರಗುವ ತೆರದಿ
ಭೂಮಿಗೆ ರಪ ರಪ ಬೀಳುವುದು

ಬೀಳುವ ಇಂತಹ ನೀರಿಗೆ ನಾವು
ಸುರಿಮಳೆ ಎಂದು ಕರೆಯುವೆವು

**– ಅನಾಮಿಕ**

**ಸಂಗ್ರಹ : ಮಂಜುಳ**

**ಗೊಂದಿ ಅಣೆಕಟ್ಟೆ ನಮ್ಮ ಹಿರೀಕರ ಬಳುವಳಿ**
**ಮುಂದಿನ ಪೀಳಿಗೆಗೆ ಉಳಿಸುವುದು ಎಲ್ಲರ ಜವಾಬ್ದಾರಿ**

# ಊರ ಮುಂದ ಕೆರೆ ಚಂದ


ಊರ ಮುಂದ ಕೆರೆ ಚಂದ, ಕೆರೆ ಹಿಂದ ಗಿರಿ ಚಂದ
ಗಿರಿಮ್ಯಾಲ ಗುಡಿ ಚೆಂದ ಪೂಜಿಸು ಭಕ್ತಿ ಭಾವದಿಂದ
ಮನಿಸುತ್ತ ಗಿಡಬಳ್ಳಿ ಮೈತುಂಬ ಹೂ ಚೆಂದ
ಹೂವಿನ ಸುಗಂಧ, ಹರಡೈತಿ ಊರೆಲ್ಲ ಮಕರಂದ ॥ ಗೀಯ ॥

ನಾಡಿಗೆ ಕಾಡು ಚೆಂದ, ಕಾಡೀಗೆ ಹೊಳಿ ಅಂದ
ಸುಳಿದಾಡೋ ಮೀನಿನ ಮೈಮಿಂಚ ಬಲುಚಂದ
ಪ್ರಾಣಿ –ಪಕ್ಷಿ ಎಲ್ಲಾ ಕೂಡಿ ಬಾಳಿಬದುಕಿದರಂದ ॥ ಗೀಯ ॥

ಮನೀಗೊಂದ ಮಗು ಚೆಂದ, ಮೊಗದಾಗ ನಗುಚಂದ
ನಕ್ಕು, ನಗಿಸೋರು ಚೆಂದ, ನಂಜನಗೂಡು ರಥದಂದ
ದುಡಿಯುವ ಕೈಚಂದ, ಮಿಂಚುವ ಮೈಚಂದ ॥ ಗೀಯ ॥

ಹುಟ್ಟಿದಾಗ ಎಲ್ಲಾ ನಂದ, ಬೆಳದಂಗ ನಂದು–ನಿಂದ
ಬಲು ದೊಡ್ಡ ಕೇಡಾತ ನಮ್ಮಿಂದ ಭುವಿಯೊಳಗ ಹರಡೈತಿ ದುರ್ಗಂಧ
ಭೇಧಭಾವಕ್ಕಿಂತ ಕೇಡು ಬ್ಯಾರಿಲ್ಲ ಇಂದ ॥ ಗೀಯ ॥

– ಅನಾಮಿಕ



ಭಾಗ 3

# ಪರಿಸರ

# ನಮೊ ನಮೊ ಭೂಮಿ ತಾಯಿ

ನಮೋಃ ನಮೋಃ ಭೂಮಿ ತಾಯಿ ಓಂ ನಮೋಃ ನಮೋಃ ಭೂಮಿತಾಯಿ
ಹೇ ನಮೋಃ ನಮೋಃ ಭೂಮಿತಾಯಿ ಓಂ ನಮೋಃ ನಮೋಃ ಭೂಮಿತಾಯಿ


ಹಸಿರ ಹೊದ್ದವಳೆ ನಮೋಃ ನಮೋಃ ಉಸಿರ ನೀಡುವಳೆ ನಮೋಃ ನಮೋಃ
ಅನ್ನ ಇಟ್ಟವಳೆ ನಮೋಃ ನಮೋಃ ನೀರ ಕೊಟ್ಟವಳೆ ನಮೋಃ ನಮೋಃ
ನಮೋಃ ನಮೋಃ ಭೂಮಿತಾಯಿ ಓಂ ನಮೋಃ ನಮೋಃ ಭೂಮಿತಾಯಿ

ಮಳೆಗಾಲದಲಿ ನಮೋಃ ನಮೋಃ ನಳನಳಿಸುವಳೆ ನಮೋಃ ನಮೋಃ
ಚಳಿಗಾಲದಲಿ ನಮೋಃ ನಮೋಃ ಮೈ ಕೊರೆಸುವಳೆ ನಮೋಃ ನಮೋಃ
ನಮೋಃ ನಮೋಃ ಭೂಮಿತಾಯಿ ಓಂ ನಮೋಃ ನಮೋಃ ಭೂಮಿತಾಯಿ

ಕಾರ್ತಿಕ ಮಾಸದಿ ನಮೋಃ ನಮೋಃ ಕಾಂತಿಲಿ ಕುಣಿವಳೆ ನಮೋಃ ನಮೋಃ
ವಸಂತ ಕಾಲದಿ ನಮೋಃ ನಮೋಃ ಫಳಫಳ ಹೊಳೆವಳೆ ನಮೋಃ ನಮೋಃ
ನಮೋಃ ನಮೋಃ ಭೂಮಿತಾಯಿ ಓಂ ನಮೋಃ ನಮೋಃ ಭೂಮಿತಾಯಿ

ಸುಗ್ಗಿಯ ಹಿಗ್ಗಲಿ ನಮೋಃ ನಮೋಃ ಹಿರಿ–ಹಿರಿ ಹಿಗ್ಗುವಳೆ ನಮೋಃ ನಮೋಃ
ಚಂದಿರನ ಬೆಳಕಲಿ ನಮೋಃ ನಮೋಃ ಚಂದದಿ ಬೀಗುವಳೆ ನಮೋಃ ನಮೋಃ
ನಮೋಃ ನಮೋಃ ಭೂಮಿತಾಯಿ ಓಂ ನಮೋಃ ನಮೋಃ ಭೂಮಿತಾಯಿ

– **ಕೆಂಪೇಗೌಡ ನಾಗಮಂಗಲ**



# ಎಲ್ಲಿ ಹೋದವೋ

ಎಲ್ಲಿ ಹೋದವೋ ಕಣ್ಣಿಗೆ ಕಾಣದಾದವೊ
ಆ ಗಿಡ ಮರ ಬಳ್ಳಿ ಪ್ರಾಣಿ ಪಕ್ಷಿ ಓತಿಕ್ಯಾತ


ಹೊತ್ತು ಮುಳುಗೋ ಹೊತ್ತಿನಾಗ ನೆತ್ತಿ ಮ್ಯಾಲತ್ತಿ ನೋಡಿದಾಗ
ಕೆರೆ ಕೋಳಿಗಳ ಹಿಂಡು ಕಿಲಕಿಲನೆ ಸಾಗಿತ್ತು
ನಂಗೊಂದು ಮೊಟ್ಟೆ ನಿಂಗೊಂದು ಮೊಟ್ಟೆ ಕೆರೆ ಕೋಳಿ ಎಂದು ಕರೆದು ಬಿಟ್ಟೆ

ಆಡು ಮೇಯಿಸಲು ನಾನು ಕಾಡು ಕಣಿವೆ ಅಲೆವಾಗ
ನರಿ ಮೊಲ ಜಿಂಕೆಗಳು ಎಲ್ಲೆಂದರಲ್ಲಿ ಆಡುತ್ತಿದ್ದವು
ಜಿಂಕೆ ನೋಡಬೇಕಂದ್ರೆ ಮೈಸೂರ್ ಜೂಗೆ ಹೋಗಿ ಕಾಸು ಕೊಡಬೇಕಲ್ಲ

ಅಲರಾಂ ಗಡಿಯಾರ ಎಲ್ಲರ ಮನೆಯಲಿರಲಿಲ್ಲ
ಹೊತ್ತಾರೆದ್ದು ಹೊಲಕೋಗಲು ಏಳಿಸೋರು ಯಾರಿರಲಿಲ್ಲ
ಗುಬ್ಬಚ್ಚಿಗಳ ಚಿಲಿಪಿಲಿಗೆ ಎಚ್ಚೆತ್ತು ನಾನು ಹೋದೇನಲ್ಲ

ಬೇಲಿ ಮ್ಯಾಲೆ ಬಣ್ಣ ಬಣ್ಣದ ಚಿಟ್ಟೆಗಳ ಪರದಾಟ
ಗುಡಿ ಗೋಪುರದ ಮೇಲೆ ರಂಗು ರಂಗಿನ ಹಕ್ಕಿಗಳಾಟ
ರಂಗನ ತಿಟ್ಟಿಗೂ ಕೂಡ ರಜೆ ಹಾಕಿ ಅವು ಹೋದಾವಲ್ಲ

– ಗೊಲ್ಲಹಳ್ಳಿ ಶಿವಪ್ರಸಾದ್



# ಹಸಿರು ಹಾದಿಯಲಿ


ಹಸಿರು ಹಾದಿಯಲಿ ಪ್ರೀತಿ ಸ್ನೇಹದಲಿ
ಪುಟ್ಟ ಪುಟ್ಟ ಹೆಜ್ಜೆ ಇಟ್ಟು ನಡೆಯೋಣ
ನಾವು ದಿಟ್ಟ ದಿಟ್ಟ ಹೆಜ್ಜೆ ಇಟ್ಟು ಸಾಗೋಣ

ಸೂರ್ಯನ ಬೆಳಕಿಗೆ ಚೇತನ
ಮಳೆಯ ಹನಿಗೆ ರೋಮಾಂಚನ
ಧರೆಯ ಸೊಬಗಿಗೆ ಬೆರಗಾಗುತ ನಡೆ
ಸಂಭ್ರಮವು ಬದುಕು ಕ್ಷಣ ಕ್ಷಣ
ತೋಂ ತನನ ತನನ ತನನಾನನ ॥ ಪ ॥

ದುಡಿಯೋಣ ನಂಬುತ ಮಣ್ಣ
ಇಳೆ ಕರುಣಿಸುವಳು ವರವನ್ನ
ಸಹಜ ಸಾವಯವ ಭೋಜನ
ಸಾವಧಾನದ ಜೀವನ
ತೋಂ ತನನ ತನನ ತನನಾನನ ॥ ಪ ॥

ಜನಜೀವಜಾಲ ಸಹಜೀವನ
ಗಡಿಗಳ ಮೀರುತ ಗೆಳೆತನ
ಭೂಮ್ತಾಯ ಮಕ್ಕಳ ಗಾನ
ಹಾಡ ಹಾಡುತ್ತ ಅರಿವಿನ ಪಯಣ
ತೋಂ ತನನ ತನನ ತನನಾನನ ॥ ಪ ॥

– ಜನಾರ್ಧನ ಕೆಸರಗದ್ದೆ



# ಎಲ್ಲಾ ಮಾಯ

ಜಣ ಜಣ ಜಣ ಜಣ ಕಾಂಚಣದಲ್ಲಿ
ಅಮೆರಿಕಾದ ಲಾಂಛನದಲ್ಲಿ
ದೇವರು ದಿಂಡಿರ ಭಜನೆಯಲ್ಲಿ
ಮಂದಿರ ಮಸೀದಿ ಜಗಳದಲ್ಲಿ
ಎಲ್ಲಾ ಮಾಯ ನಾಳೆ ನಾವು ಮಾಯ ॥ ಎಲ್ಲಾ ಮಾಯ ॥

ಮಳೆಯು ಇಲ್ಲ ಬೆಳೆಯೂ ಇಲ್ಲ
ಕೋಗಿಲೆಯ ದನಿ ಕೇಳಲೇ ಇಲ್ಲ
ನೆಲದ ಒಳಗಿನ ಇಲಿಯೂ ಇಲ್ಲ
ಮರದ ಮ್ಯಾಲಿನ ಗಿಳಿಯೂ ಇಲ್ಲ
ನಿನ್ನೆ ಅವುಗಳು ಇಂದು ನಾವು
ನಾಳೆ ಎಲ್ಲಾ ಮಾಯವಯ್ಯಾ ॥ ಎಲ್ಲಾ ಮಾಯ ॥

ಅಪ್ಪ ಅಮ್ಮರ ಕಾಲದಲ್ಲಿ
ಗುಂಡು ತೋಪುಗಳು ಇದ್ದವು ಅಣ್ಣ
ಮೋಡಗಳನ್ನೆ ಗದರಿ ಅವುಗಳು
ಮಳೆಯನು ತರುತಾಲಿದ್ದವು ಅಣ್ಣ
ಮುಚ್ಚಿಹೋದವು ಬತ್ತಿ ಹೋದವು
ಜಗಕ್ಕೆ ಶಾಪ ಕೊಟ್ಟು ಹೋದವು ॥ ಎಲ್ಲಾ ಮಾಯ ॥

ಊರ ನೆರೆಯಲಿ ಗೋಕುಂಟೆಗಳು
ಕಿಲಕಿಲನೆ ನಗುತ್ತಿದ್ದವು ಅಣ್ಣ
ಹಸಿರು ಹಾಸಿಗೆ ಮ್ಯಾಲೆ ಕುರಿಗಳು
ಆಟ ಪಾಟ ಆಡುತ್ತಿದ್ದವು
ದೂರವಾಯಿತು ಆ ಸಂಬಂಧ
ಮಿತಿಯು ಮೀರಿದ ಆಸೆಗಳಿಂದ ॥ ಎಲ್ಲಾ ಮಾಯ ॥


ಎಣಿಸಲಾಗದ ಎಷ್ಟೋ ಗಿಡಗಳು
ಎಣಿಸಲು ಕೂಡಾ ಇಲ್ಲವಾದವು
ಗುಡುಗು ಮಿಂಚಿನ ಮಳೆಯ ಹನಿಗಳು
ಇಣುಕಿ ನೋಡದೆ ಎಲ್ಲಿ ಹೋದವು
ಕಾಡು ಕಣಿವೆಗಳು ಕಾಣದಾದವು
ಗಿಡಮರಬಳ್ಳಿ ಇಲ್ಲವಾದವು ॥ ಎಲ್ಲಾ ಮಾಯ ॥

ನಿಂತಲ್ಲೆಲ್ಲಾ ನೀರೇ ಇತ್ತು
ಕೆರೆಗಳು ತುಂಬಿ ತುಳುಕುತ್ತಲ್ಲಿತ್ತು
ಕೊಂಬೆ ಮ್ಯಾಲೆ ಕೋಗಿಲೆ ಇತ್ತು
ಕೋತಿಯು ಕೂಡಾ ಕುಣಿಯುತ್ತಿತ್ತು
ಅಂತರ್ಜಲವೇ ಬತ್ತಿ ಹೋಯಿತು
ಸಾವಿರ ಅಡಿಗಳು ದಾಟಿ ಹೋಯಿತು ॥ ಎಲ್ಲಾ ಮಾಯ ॥

ಟಿಂಗ್ ಟಿಂಗ್ ಟಿಂಗ್ ಟಿಂಗ್ ತಂಬೂರಿ ಇಲ್ಲ
ಜಗ್ಗುಣಕ್ಕು ಜಗ್ಗುಣಕ್ಕು ತಮಟೆಗಳಿಲ್ಲ
ಟಸ್ಸು ಪುಸ್ಸುಗಳು ಬಂದಾವೆಲ್ಲ
ಕಲೆಯೂ ಕೂಡಾ ಕೊಲೆಯಾಯ್ತಲ್ಲ
ಸಿನಿಮಾ, ಟಿ.ವಿ, ಭೂತಕ್ಕೆ ಸಿಕ್ಕಿ
ಸಂಸ್ಕೃತಿ ಎಲ್ಲಾ ಸೊರಗೋಯ್ತಲ್ಲ ॥ ಎಲ್ಲಾ ಮಾಯ ॥

ಹರಿಶಿಣ ನುಂಗಿತು ಪೇರ್ ಅಂಡ್ ಲವ್‌ಲಿ
ಕುಂಕುಮ ನುಂಗಿತು ಸ್ಟಿಕ್ಕರ್ ಚುಕ್ಕಿ
ಎಳೆ ನೀರನ್ನು ಇರಿದುಕೊಂದಿತು
ಕೊಕ್ಕೋಕೋಲಾ ಕೇಕೆ ಹಾಕಿತು
ಪರಂಗಿಯವನು ಮತ್ತೆ ಬಂದರೆ
ನೀನೂ ನಾನೂ ಯಾರೂ ಇಲ್ಲ ॥ ಎಲ್ಲಾ ಮಾಯ ॥

– ಗೊಲ್ಲಹಳ್ಳಿ ಶಿವಪ್ರಸಾದ್



# ಮೆರವಣಿಗೆ

ಒಂದಲ್ಲಾ ಒಂದು ದಿನ ಈ ನೆಲದಾ ಹೆಣ್ಣುಗಳು
ಮೆರವಣಿಗೆ ಹೊರಡುತ್ತಾರೇ ಮೆರವಣಿಗೆ ಹೊರಡುತ್ತಾರೆ

ಮಳೆ ಹಾಡ ಹಾಡುತ್ತಾ
ಸಾಲು ಗಿಡಗಳಾ ನೆಡುತ್ತಾ ॥ ಮೆರವಣಿಗೆ ॥

ದೇಹದಗುಂಟಾ ಹರಿದ ನೆತ್ತರ ಚರಿತೆ ತೊಳೆಯುತಾರೆ
ಇವರು ಚರಿತೆ ತೊಳೆಯುತಾರೆ
ಹೆಣ್ಗಳು ಚರಿತೆ ತೊಳೆಯುತಾರೆ
ಹೊಸ ನದಿಯಾ ಹುಡುಕುತ್ತಾ ಹುಡುಕುತ್ತಾ ಸಾಗುತಾರೆ ॥ ಮೆರವಣಿಗೆ ॥

ದೇಹವ ಮುಚ್ಚಿದ ಎಲ್ಲವ ಕಳಚಿ ಬಿಡಿಸಿಕೊಳ್ಳುತಾರೆ
ಬಂಧನ ಬಿಡಿಸಿಕೊಳ್ಳುತಾರೆ
ಇವರು ಬಿಡಿಸಿಕೊಳ್ಳುತಾರೆ
ಈ ನೆಲದಾ ಹಾದಿ ಬೀದಿಗಳ ತುಂಬಾ ಸಾಗುತಾರೆ ॥ ಮೆರವಣಿಗೆ ॥

– ಡಾ. ವಿನಯಾ ವಕ್ಕುಂದ



# ಬಿದಿರು

ನಾನ್ಯಾರಿಗಲ್ಲದವಳು
ಬಿದಿರು ನಾನ್ಯಾರಿಗಲ್ಲಾದವಳು
ಹುಟ್ಟುತ ಹುಲ್ಲಾದೆ ಬೆಳೆಯುತಾ ಮರವಾದೆ
ಪುಟ್ಟ ಪುಟ್ಟ ಮಕ್ಕಳಿಗೆ ತೂಗುವಾ ತೊಟ್ಟಿಲಾದೆ ।ನಾ।

ರಂಗನಿಗೆ ಕೊಳಲಾದೆ
ಕಂದನಿಗೆ ತೊಟ್ಟಿಲಾದೆ
ಆಡುವಾ ಮಕ್ಕಳಿಗೆ ಓಡುವಾ ಕುದುರೆಯಾದೆ ।ನಾ।

ಅತ್ತೆಮನೆ ಸೊಸೆಯರಿಗೆ
ಬೀಸುವಾ ಕುಕ್ಕೆಯಾದೆ
ಮುತ್ತೈದೆ ಮಕ್ಕಳಿಗೆ ಬಾಗಿನದ ಮೊರವಾದೆ ।ನಾ।

ಮುದುಕಾಗೆ ಬಡಿಗ್ಯಾದೆ
ಮುತ್ತಿನಾ ಬೆತ್ತವಾದೆ
ದೊಡ್ಡದೊಡ್ಡ ಮಠಗಳಿಗೆ ಕಜ್ಜಾಯ ಬುಟ್ಟಿಯಾದೆ ।ನಾ।

ಮದುವೆಯ ಹಂದರಕ್ಕೆ ಚಪ್ಪರದ ಕಂಬವಾದೆ
ಮೈದುಂಬೋ ಕುಣಿತಕ್ಕೆ
ನಂದಿಯಾ ಕೋಲಾದೆ ।ನಾ।

ಆಡುಕಾಯೊ ಮಕ್ಕಳಿಗೆ ಸೆಣೆಯೆಂಬೋ ಜವಳಿಯಾದೆ
ಕಾಳುಗಳ ಕೂಡಿ ಇಡಲು
ತಟ್ಟಿನ ಕಣಜವಾದೆ ।ನಾ।

ಊರೂರು ಸೂರಾದೆ ಕೂರಿಗೆಯ ಕೊಳವೆಯಾದೆ
ಮುಪ್ಪಿನ ಮುದುಕರಿಗೆ
ಊರೆಂಬೋ ಕೋಲಾದೆ ।ನಾ।

ಅಂಬಿಗಗೆ ಹುಟ್ಟು ಆದೆ ಮ್ಯಾದಾರ್ಗೆ ಬುಟ್ಟಿಯಾದೆ
ಹತ್ತುವವಗೆ ಏಣಿಯಾದೆ
ಸತ್ತವಂಗೆ ಚಟ್ಟವಾದೆ ।ನಾ।

ತಿಪ್ಪೆಯ ಕೆಳಗಿದ್ದೆ ಅದರುದ್ದ ಬೆಳೆದಿದ್ದೆ
ಶಿಶುನಾಳಾಧೀಶಾನ ನಂದಿಯಾ ಕೋಲಾದೆ ।ನಾ।

– ಸಂತ ಶಿಶುನಾಳ ಷರೀಫ

# ಸೃಷ್ಟಿಯ ಚಲನ

ಸೃಷ್ಟಿಯ ಚಲನ ಜೀವನ ಮರಣ
ಜೀವ ಜೀವಗಳ ಈ ಮಣ್ಣಾ
ಮೂರೇ ದಿನದ ಸಂತೆಯ ಮುಗಿಸಿ
ಸೇರುವರೆಲ್ಲ ಈ ಮಣ್ಣಾ

ಕಾಡಲಿ ಹುಟ್ಟಿದ ಕೋಗಿಲೆಯ
ಧ್ವನಿಯ ಮಿಗಿಲೆಂದೆ ಹೇಳುವರು
ಕೆಸರಲಿ ಹುಟ್ಟಿದ ತಾವರೆಯ
ದೇವರ ಮುಡಿಯಲಿ ಮುಡಿಸುವರು
ಎಲ್ಲಿದೆಯಣ್ಣ ಮಡಿ ಮೈಲಿಗೆಯು
ಸೃಷ್ಟಿಯ ಮೂಲ ಈ ಮಣ್ಣಾ॥
ಮೂರೇ ದಿನದ ಸಂತೆಯ ಮುಗಿಸಿ
ಸೇರುವರೆಲ್ಲ ಈ ಮಣ್ಣಾ ॥ ಪ ॥

ಜಾತಿ ಧರ್ಮ ಮಡಿ ಮೈಲಿಗೆಯ
ಭೇಧ ಭಾವ ಈ ಮಣ್ಣಿಗಿಲ್ಲ
ಬಡವಾ ಬಲ್ಲಿದ ಧನಿಕನೆಂಬ
ಭೇಧ ಭಾವ ಈ ಮಣ್ಣಿಗಿಲ್ಲ
ಯಾರೇ ಬಿತ್ತಿದರೂ ಫಲವನು ಕೊಡುವ
ಪಾವನವಾದ ಈ ಮಣ್ಣಾ
ಮೂರೇ ದಿನದ ಸಂತೆಯ ಮುಗಿಸಿ
ಸೇರುವರೆಲ್ಲ ಈ ಮಣ್ಣಾ ॥ ಪ ॥

– ಅನಾಮಿಕ



# ಅಡವಿ ತಾಯಿ

ರೇ....ಲಾ.....ರೇ ರೇ....ಲಾ.....ರೇ
ಜುಂಬಕ ಜುಂಬಕ ಜುಂಬಕ ಬೋಲಾ ಜುಂಬಕ ಜುಂಬಕ ಜುಂ
ಅಡವಿ ತಾಯಿಗೆ ವಂದನೆ ನಮ್ಮ ತಾಯಿ ಅಡವಿಗೆ ವಂದನೆ....
ಅಡವಿ ತಣ್ಣಾಗಿದ್ರೆ ಅನ್ನಕ್ಕೆ ಕೊರತೆಯಿಲ್ಲ
ಬೆಳೆಯು ಹುಟ್ಟಿಗೆ ಬಂದ್ರೆ ಹಬ್ಬವ ಮಾಡೋಣ ॥ ಅಡವಿ ॥

ಬೆಟ್ಟ ಗುಡ್ಡಗಳ ನಟ್ಟ ನಡುವೆ ಗೋದಾವರಿಯು ಹರಿದಾಳೆ ನೋಡು
ಅಂಕು ಡೊಂಕಾಗಿ ವೈಯಾರದಿಂದ ಕಾವೇರಿ ತಾಯಿ ಹರಿದಾಳೆ ನೋಡು
ಹೊಳೆ ತೀರ ಬುಗ್ಗೆ ನೋಡು ತಿಳಿ ನೀರ ಕೊಳವ ನೋಡು
ಜೀವ ನದಿಗಳು ಸುತ್ತುಗಟ್ಟಿದ ಅಡವಿ ತಾಯಿಯ ಅಂದವ ನೋಡು

ಕುಹೂ ಕುಹೂ ಕುಹೂ ಎನ್ನುವ ಕೋಗಿಲೆಯ ಹಾಡು
ಕಿಲ ಕಿಲ ಕಿಲ ಎನ್ನುವ ಗಿಳಿ ಹಿಂಡಿನ ಕಲರವ
ಪಾರಿವಾಳ ಜೋಡಿ ನೋಡು ಹಾರೋ ಹಕ್ಕಿ ಹಾಡು ಕೇಳು
ಎಲ್ಲರ ಬದುಕಿಗೆ ನೆರಳಾಗಿ ನಿಂತ ಅಡವಿ ತಾಯಿಯ ಅಂದವ ನೋಡು ॥ ರೆ ॥

ಕಾಡುಕೋಣಗಳ ಜಿಂಕೆ ಹಿಂಡುಗಳ ಓಟದ ನೋಟ ಹೇಗಿದೆ ನೋಡು
ಆನೆಹಿಂಡುಗಳ ಹುಲಿಚಿರತೆಗಳ ಎದೆ ನಡುಗಿಸುವ ಘರ್ಜನೆ ಕೇಳು
ನವಿಲು ಹಿಂಡು ನಾಟ್ಯ ನೋಡು ಜಿಂಕೆ ಜಿಗಿವ ಚಂದ ನೋಡು
ಎಲ್ಲರ ಬದುಕಿಗೆ ನೆರಳಾಗಿ ನಿಂತ ಅಡವಿ ತಾಯಿಯ ಅಂದವ ನೋಡು ॥ ರೆ ॥

ಬಂಡೆಗಳೊಯ್ದು ಬೆಟ್ಟವ ನುಂಗುವ ಹೆಬ್ಬಾವುಗಳ ಕೋರಿಯ ನೋಡು
ಬುಸುಗುಟ್ಟುವ ವಿಷವನ್ನೆ ಕಕ್ಕುವ ಕಾಳಿಂಗ ಸರ್ಪದ ನೋಟವ ನೋಡು
ನಾಗರಾವು ಹೆಡೆಯ ನೋಡು ಪಟ್ಟೆ ಹಾವು ಪಟ್ಟೆ ನೋಡು
ಹಾವು ಮಾನವ ಕೂಡಿ ಬಾಳುವ ಅಡವಿ ತಾಯಿಯ ಗುಂಡಿಗೆ ನೋಡು ॥ ರೆ ॥

ಭೀಮ ದೇವರ ಜಾಲಿ ದೇವರ ತಾಯಿ ನಮ್ಮಮ್ಮ ಜುಂಗುಬಾಯಮ್ಮ
ನಮ್ಮ ಮಕ್ಕಳು ಮರಿಗಳ ತಣ್ಣಗೆ ಕಾಪಾಡು ತಾಯಿ ನಮ್ಮಮ್ಮ ಜುಂಗುಬಾಯಮ್ಮ
ಈಚಲು ಹೆಂಡ ತಂದು ಧಾರೆಯೆರೆವೆವು ತಾಯಿ
ಕುರಿ ಕೊಬ್ಬಿದ ಹುಂಜವ ತಂದು ಕುಯ್ದು ಹಾರ ಕೊಡುವೆವು ತಾಯಿ

ಯಾರಿಗೂ ತಲೆ ಬಾಗೆವು ತಲೆ ಬಾಗೆವು ಯಾತಕು ಭಯ ಪಡೆವು ಭಯ ಪಡೆವು
ಈ ನಾಡ ಮಣ್ಣಿನ ಒಕ್ಕಲು ನಾವು ದಲಿತ ಸಂಘದ ಮಕ್ಕಳು ನಾವು ॥ ರೆ ॥

ಮೂಲ : **ತೆಲುಗು**
ಅನುವಾದ : **ಕೋಟಿಗಾನಹಳ್ಳಿ ರಾಮಯ್ಯ**

ಭಾಗ 4

# ಕೃಷಿ

# ರೈತನ ಮಗಳು

ಬಾ ತಂಗಿ ಬಾರವ್ವ ಬಾರೇ ರೈತನ ಮಗಳೇ
ಹುಟ್ಟುಟ್ಟೋರಿಗಂಜಿ ಹುಸಿ ಹೊಡೆದ ಹೊಂಬಾಳೆ
ತಾಯೇ ಬಾ ತಂಗ್ಯವ್ವ ಬಿಸಿಲಲ್ಲಿ ಬೆಂದವಳೆ
ತಂಗ್ಯೇ ಬಾ ತಾಯವ್ವ ಮಾಯೆಯ ಹೆಸರಲಿ ನೊಂದವಳೆ ॥ ಪ ॥

ಮಣ್ಣಲ್ಲಿ ಮಿಡಿದವಳೆ ಗಂಜಳದಲ್ಲಿ ನಿಂದವಳೆ
ತಲೆಮ್ಯಾಲೆ ಕಸಹೊತ್ತು ಹೊಸ ಕನಸ ಕಂಡವಳೆ
ಹುಟ್ಟುತ್ತಾ ಮನೆಗಂಜಿ ಬೆಳೆಯುತ್ತಾ ಜನಕಂಜಿ
ಸೇರಿದಾ ಮನೆಯಲ್ಲಿ ಎದೆ ಹಿಡಿದು ಬದುಕಿದೆ ॥ ಪ ॥

ಬೈದಾರೆ ಬಗೆ ನೊಂದೆ ಹೊಗಳಿದರೆ ಕರಗೀದೆ
ಗಂಡಸರ ಹೊಡೆತಕ್ಕೆ ಮೊಂಡಾದೆ ಬೆಂಡಾದೆ
ಗಂಡ ಅಂತಾ ಕೂಡಿ ಕುಂಡಿಗೆ ಸೀರೆ ಕಾಣ್ದೆ
ಸುಖ ನೀಡಿ ಸೊರಗೀದೆ ಬೆಣ್ಣ್ಯಾಗಿ ಕರಗೀದೆ ॥ ಪ ॥

ಹತ್ತೀಯ ಬಿಡಿಸಿದರೂ ಹೊಸಬಟ್ಟೆ ಕನಸಾಯ್ತು
ರೇಷ್ಮೇಯ ಸಾಕಿದರೂ ಕುಪ್ಪಸವೇ ಇಲ್ಲವಾಯ್ತು
ಹೊಲದಲ್ಲಿ ಕಳೆಕಿತ್ತು ಒಳಮಲ್ಲಿ ಅಟ್ಟಿಕ್ಕ
ಗಂಡೀನಾ ಅಬ್ಬರಕ್ಕೆ ಮಂಡಿಯ ಒಳಗೆ ಅತ್ತವಳೆ ॥ ಪ ॥

ಎಷ್ಟೊತ್ತು ಗೇದಾರು ಕಷ್ಟವು ಹರಿಯಾದೆ
ಹುಟ್ಟಿದವು ಹುಲ್ಲಾದೊ ತಲೆಯಿಲ್ದೆ ಕಲ್ಲಾದೊ
ನಿನ್ನ ಮಕ್ಕಳು ರೈತ್ರು ಮಣ್ಣಾದೋ ಮುಸಿಯಾದೋ
ನಿನ್ನ ಜೀವದ ಕನಸು ಹುಸಿಯಾಯ್ತು ಹುಸಿಯಾಯ್ತು ॥ ಪ ॥

ತಿಳಿದ್ದೇಳೆ ಮಕ್ಕಳಿಗೆ ಕಿವಿಗ್ದೇಳೆ ಕೂರಿಸಿ
ಹೊತ್ತಿಗೆ ಸರಿಯಾಗಿ ಬದುಕಲು ಹೇಳವ್ವ
ನೀನು ಇದ್ದರೆ ಜೀವ ನೀ ಬಂದು ಸೇರವ್ವ
ಸಂಘಕ್ಕೆ ತಾಯಾಗಿ ಭೂಮ್ಯಾಗಿ ಕಾಯವ್ವ ॥ ಪ ॥

– ಹಿ.ಶಿ. ರಾಮಚಂದ್ರಗೌಡ

**ತಿಂಗಳಿಗೊಮ್ಮೆ ಶ್ರಮದಾನ ಮಾಡಿ, ಗೊಲಗಾಲುವೆಗಳನ್ನು ಸರಿ ಮಾಡಿ**

# ಮಣ್ಣ ಮಾತು

ಮಣ್ಣ ಕಣಕಣದಿ ಮಾತು ಆಲಿಸಯ್ಯ
ಉಳುವಾ ರೈತ ಅನ್ನದಾತ
ಹೊಲಗದ್ದೆಗಳಿಗೆ ತೆರಳಿ
ಹಳ್ಳಿಯ ವನಸಿರಿ, ಖಗಸಿರಿ
ಹಕ್ಕಿ ಉಲಿಯುವ ಸದ್ದು ಕೇಳೋಣ ಬಾರಾ ॥ ಪ ॥

ಬೆಳೆ ವೈವಿಧ್ಯತೆ ಮತ್ತೆಲ್ಲೂ ಇಲ್ಲ
ನಂಬಲೇಬೇಕಿದು ಸತ್ಯ
ಋತುಮಾನ ಈ ಮಣ್ಣಿನ ಗುಣ
ನಮೋ ನಮೋ ಎನ್ನಿ ಭೂ ತಾಯಿಗೆ ॥ ಪ ॥

ಭೂಮಿಯಲ್ಲಿದೆ ಜೀವರಾಶಿ
ಕೋಟಿಕೋಟಿ ಕಣವು
ಅನ್ನಬ್ರಹ್ಮನ ಸಹಚರರು ನೋಡು
ನಮೋ ನಮೋ ಎನ್ನಿ ಭೂ ತಾಯಿಗೆ ॥ ಪ ॥

**– ವೀರೇಶ್ ಯರಬಾಳು**



# ಊರಿಗೆ ಮಳೆ ಬಂತು

ಊರಿಗೆ ಮಳೆ ಬಂತು ಏರು ಕಟ್ಟೊ ಕಂದಯ್ಯಾ
ಊರ ಮುಂದಿರುವ ಬಸವಂಗೆ
ಊರ ಮುಂದಿರುವ ಬಸವಂಗೆ ಕೈಮುಗಿದು
ಏರು ಕಟ್ಟೊ ಮುದ್ದು ಮುಖದವನೆ
ಏಹೇ ಏರು ಕಟ್ಟೊ ಮುದ್ದು ಮುಖದವನೆ
ತಂದಾನಿ ತಂದನಾನಿ ತಂದನಾನೋ ತಾನಿ ತಂದಾನಿ ತಂದನಾನಿ ತಂದನಾನೋ

ಕಾಡ್ಹೋರಿ ಕಪ್ಹೋರಿ ಕಡಲೆ ಬಣ್ಣದ ಹೋರಿ
ಈರಣ್ಣನೆಂಬೋ ಹೊಸ ಹೋರಿ ॥ 2 ॥
ಈರಣ್ಣನೆಂಬೋ ಹೊಸಹೋರಿ ಕಟ್ಕೊಂಡು
ಬಾರೊ ಬಸವಯ್ಯ ಬಯಲಿಗೇ
ಬಾರೊ ಬಸವಯ್ಯ ಬಯಲಿಗೇ ॥ ತಂದಾನಿ ॥

ಹತ್ತು ಸಾವಿರ ಪದವ ಎತ್ತಿನ್ ಮೇಲೇರ್ಕೊಂಡು
ಮತ್ತೆ ಸಾವಿರ ಕೈಲಿ ಹಿಡಕೊಂಡು ॥ 2 ॥
ಮತ್ತೆ ಸಾವಿರ ಕೈಲಿ ಹಿಡಕೊಂಡು ಕಂದಯ್ಯಾ
ನೂರೊಂದು ಸಾಲ ಹೊಡೆದವ್ನೆ
ನೂರೊಂದು ಸಾಲ ಹೊಡೆದವ್ನೆ ॥ ತಂದಾನಿ ॥

ಬಸವಯ್ಯ ಬಿತ್ತಲಿ ಹೊಸಪೇಟೆ ಕಟ್ಟಾಲಿ
ರಸಬಾಳೆ ಕಬ್ಬು ಬೆಳೆಯಾಲಿ ॥ 2 ॥
ರಸಬಾಳೆ ಕಬ್ಬು ಬೆಳೆಯಾಲಿ ನಮ್ಮೂರಾ
ಬಸವಣ್ಣನ್ ತೇರು ಹರಿಯಾಲಿ
ಬಸವಣ್ಣನ್ ತೇರು ಹರಿಯಾಲಿ ॥ ಊರಿಗೆ ॥



– ಜಾನಪದ

# ನವಣೆ ಹಾಡು

ನವಣೀಯ ಕುಟ್ಟಿ ಕುಟ್ಟಿ
ನೊಯಿದಾವ ಎರಡೂ ರಟ್ಟಿ
ಬೆಳವಲ ನಾಡಿಗೆ ನನ್ಯಾಕ ಕೊಟ್ಟಿ

ಮುಂಜಾನಿ ಏಳುದು ಗಟ್ಟಿ
ಹೊಡೆಯಬೇಕ ಅಂಗಳ ಕಟ್ಟಿ
ಹೊರಬೇಕ ಯವ್ವ ಸಗಣೀಯ ಬುಟ್ಟಿ

ಶೆಟ್ಟಿ ಹೊಂಟಾನ ಹೊಲಾಕ
ಮಾಡಬೇಕ ಬಿಸಿಬಿಸಿ ರೊಟ್ಟಿ
ಕೊನಿಗೂ ನಾ ತಿನ್ನೋದು ತಂಗಾಳ ರೊಟ್ಟಿ

ನಮ್ಮೂರು ಮಲೆನಾಡ ಹಟ್ಟಿ
ಕೊಟ್ಟಾರವ್ವ ಬೆಳವಲ ನಾಡಿಗೆ
ನನ್ನ ಕೊಡಿಸಿದನವ್ವ ಈ ಹಾಳ ಶೆಟ್ಟಿ

– ಜಾನಪದ



# ಮಂಕಾಗದಿರಲಿ ನಮ್ಮ ಬದುಕು

ಭೂಮಿ ತಾಯಿಗೆ ವಿಷವ ಯಾರೂ ಹಾಕದೆ ಇರಲಿ
ನಂಜಾಗದಿರಲಿ ನೆಲಜಲ । ಶಿವಶಿವ
ಮಂಕಾಗದಿರಲಿ ನಮ್ಮ ಬದುಕು ॥

ಸುತ್ತಲ ಮರದಲ್ಲಿ ಹಿತ್ತಲ ಗಿಡದಲ್ಲಿ
ಮದ್ದಿಹುದು ನೂರೆಂಟು ಬಗೆಯಲ್ಲಿ । ಅಕ್ಕವ್ವ
ಕಾಯುವುದು ಬೆಳೆಯನ್ನ ಜತನದಲ್ಲಿ ॥

ಹೊಂಗೆ ಸೊಪ್ಪನು ತುಳಿದು ಬೇವಿನಿಂಡಿಯ ಸುರಿದು
ಬೆಳೆಯಲಾಗದೆ ಗದ್ದೆ ಭತ್ತ । ಅಣ್ಣಯ್ಯ
ಉಳಿಯಲಾಗದೆ ಕ್ರಿಮಿಕೀಟ ॥

ಹೊಲಕೆ ಬೂದಿಯ ಚೆಲ್ಲಿ ಗಿಡಕೆ ಸಗಣಿಯ ಬಳಿದು
ಬಳಸಬಹುದಲ್ಲವೇ ಹಸುಗಂಜಲ । ತಂಗವ್ವ
ಉಳಿಸಬಹುದಲ್ಲವೇ ದುಂದುವೆಚ್ಚ ॥

ಎಳನೀರು ಮಜ್ಜಿಗೆ ಆವರಿಕೆ ಬಿಲ್ಪತ್ರೆ
ಆಗದೆ ದೇಶೀಯ ಕ್ರಿಮಿನಾಶಕ । ತಮ್ಮಯ್ಯ
ದತ್ತೂರಿ ಬೀಜವೇ ಕೀಟನಾಶಕ ॥

**– ಕೆಂಪೇಗೌಡ ನಾಗಮಂಗಲ**



# ನಾವು ಕೂಡ ಗೆಲ್ಲುವೆವು

ಅಕ್ಕಗಳಿರಾ ತಂಗಿಯರಿರಾ
ಕಷ್ಟಪಡುವ ಅಮ್ಮಗಳಿರಾ
ನಾವೆಲ್ಲಾ ಸೇರುವೆವು
ಒಳ್ಳೆ ಕೆಲಸ ಮಾಡುವೆವು
ಆತ್ಮಗೌರವ ಇದೇ ಆತ್ಮಗೌರವ

ನಾವು ಕೂಡ ಬರೆಯುವೆವು
ನಾವು ಕೂಡ ಓದುವೆವು
ನಾವೂ ಮಾತಾಡುವೆವು
ಒಳ್ಳೆ ಕೆಲಸ ಮಾಡುವೆವು
ಆತ್ಮಗೌರವ ಇದೇ ಆತ್ಮಗೌರವ

ನಾವು ಕೂಡ ನಿಲ್ಲುವೆವು
ನಾವು ಕೂಡ ಗೆಲ್ಲುವೆವು
ನಾವೂ ಮಾತಾಡುವೆವು
ಒಳ್ಳೆ ಕೆಲಸ ಮಾಡುವೆವು
ಆತ್ಮಗೌರವ ಇದೇ ಆತ್ಮಗೌರವ

**– ಗ್ರಾಮೀಣ ಮಹಿಳಾ ಒಕ್ಕೂಟ**
ಹೊನ್ನಶೆಟ್ಟಿಹಳ್ಳಿ, ಮುಳಬಾಗಿಲು ತಾ॥

ಭಾಗ 5

# ಇತರೆ

# ಹಸಿರು ಕಡ್ಡಿಯ ಸೀರೆ

ಹಸಿರು ಕಡ್ಡಿಯ ಸೀರೆ
ಟೋಪು ಸೆರಗು ಮ್ಯಾಲೆ ಮಾಡಿ
ಬಿಸಿಲಿಗೆ ಬೆನ್ನು ಮಾಡಿ ನಡೆಯಂಗಾಗೈತ್ರಿ
ಬಾಲಾನಾ ಭಾವಕ್ಕಾಗಿ ಬಯಸಂಗಾಗೈತ್ರಿ


ಬಿಳಿಯಾ ಜೋಳದ ರೊಟ್ಟಿ
ಎಳೆಯ ಚೌಳಿ ಕಾಯಿ ಪಲ್ಯ
ಹೊಂಗೇ ನೆರಳಲ್ಲಿ ಕುಂತ್ಕೊಂಡ್ ತಿನ್ನಂಗಾಗೈತ್ರಿ
ಬಾಲಾನಾ ಭಾವಕ್ಕಾಗಿ ಬಯಸಂಗಾಗೈತ್ರಿ

ಹರುಕಲು ಮುರುಕಲು ಕರ್ಜಿ ಕಾಯಿ
ಹಪ್ಪಳ ಸಂಡಿಗೆ ಉಪ್ಪಿನಕಾಯಿ
ಹೊಳೆಯಾ ದಂಡೆಲಿ ಕುಂತ್ಕೊಂಡ್ ತಿನ್ನಂಗಾಗೈತ್ರಿ
ಬಾಲಾನಾ ಭಾವಕ್ಕಾಗಿ ಬಯಸಂಗಾಗೈತ್ರಿ

ಹೂವಗಾರನ ಮನೆಗೆ ಹೋಗಿ
ಹೂವಿನ ದಂಡೆ ಪೋಣಿಸಿಕೊಂಡು
ಗಂಡಾನಾ ಪಕ್ಕದಲ್ ಕುಂತ್ಕೊಂಡ್ ಮುಡಿಯಂಗಾಗೈತ್ರಿ
ಬಾಲಾನಾ ಭಾವಕ್ಕಾಗಿ ಬಯಸಂಗಾಗೈತ್ರಿ

ಕುಂತ್ರೆ ಸೊಂಟ ನೋಯುತ್ತೈತ್ರಿ
ನಿಂತ್ರೆ ಸೊಂಟ ನೋಯುತ್ತೈತ್ರಿ
ತವರೀಗಿ ಹೋಗಿ ನನಗ ಕೂಡೋಂಗಾಗೈತ್ರಿ
ಬಾಲಾನಾ ಭಾವಕ್ಕಾಗಿ ಬಯಸಂಗಾಗೈತ್ರಿ

**– ಜಾನಪದ**



# ಯಾರ ಹೊಲ ಯಾರ ಮನೆ

ಯಾರ ಹೊಲ ಯಾರ ಮನೆ ಮೆಚ್ಚಿ ಕುಂತೆ ಸುಳ್ಳೆ ಎಲ್ಲಾ
ಯಾರ ಹೊಲ ಯಾರ ಮನೆ ಮೆಚ್ಚಿ ಕುಂತೆ ಸುಳ್ಳೆ ಎಲ್ಲಾ
ನಾನು ನನದು ಎನುತೀಯಲ್ಲಾ
ನೀ ಹೋಗುವುದು ಗೊತ್ತೆ ಇಲ್ಲಾ ॥ ಯಾರ ॥

ದಾನ ದರ್ಮ ಮೊದಲೇ ಇಲ್ಲಾ
ಗಳಿಸಿ ಗಳಿಸಿ ಇಟ್ಟಿದೆಯಲ್ಲಾ
ಒದಗಿ ಬಂತು ಮರಣದ ಕಾಲ
ನೀ ಹೋದ ಮ್ಯಾಲೆ ಇದು ಯಾರ ಪಾಲಾ ॥ ಯಾರ ॥

ಹಣವ ಬಹಳ ಗಳಿಸಿದೆ ಹೆಚ್ಚ
ಸಾಯೋತನಕ ತಿನುತಿಹೆ ನುಚ್ಚಾ
ಬಾಯಲ್ಲಿ ಮಾತ್ರ ಬೆಲ್ಲದ ಅಚ್ಚ
ಪರೋಪಕಾರ ಮಾಡಲಿಲ್ಲ ಹುಚ್ಚಾ ॥ ಯಾರ ॥

ಹುಟ್ಟಿದವರು ಉಳಿಯುವುದಿಲ್ಲಾ
ತಿರುಗಿ ತಿರುಗಿ ಬರುವುದಿಲ್ಲಾ
ಪಂಚಾಕ್ಷರಿ ಹೇಳಿದ ಖುಲ್ಲಾ
ಗುರು ಮರೆತರೆ ಗತಿಯಾರಿಲ್ಲಾ ॥ ಯಾರ ॥

– ಜಾನಪದ



# ಕಾಡು ಕುದುರೆ ಓಡಿ ಬಂದಿತ್ತಾ

ಊರಿನಾಚೆ ದೂರದಾರಿ ಸುರುವಾಗೋ ಜಾಗದಲ್ಲಿ
ಮೂಡಬೆಟ್ಟ ಸೂರ್ಯ ಹುಟ್ಟಿ ಹಸಿರಿನ ಗುಟ್ಟ ಒಡೆವಲ್ಲಿ
ಮುಗಿವೆ ಇಲ್ಲದ ಮುಗಿಲಿನಿಂದ
ಜಾರಿ ಬಿದ್ದ ಉಲ್ಕಿ ಹಾಂಗ
ಕಾಡಿನಿಂದ ಛಂಗನೆ ನೆಗೆದಿತ್ತ ॥

ಮೈಯ ಬೆಂಕಿ ಮಿರುಗುತಿತ್ತ ಬ್ಯಾಸ್ಗಿ ಬಿಸಿಲ ಉಸಿರಾಡಿತ್ತ
ಹೊತ್ತಿ ಉರಿಯೋ ಕೇಶರಾಶಿ ಕತ್ತಿನಾಗ ಕುಣಿಯುತಿತ್ತ
ಧೂಮಕೇತು ಹಿಂಬಾಲಿತ್ತ
ಹೌಹಾರಿತ್ತ ಹರಿದಾಡಿತ್ತ
ಹೈ ಹೈ ಅಂತ ಹಾರಿ ಬಂದಿತ್ತಾ ॥

ಕಣ್ಣಿನಾಗ ಸಣ್ಣ ಖಡ್ಗ ಆಸುಪಾಸು ಝಳಪಿಸಿತ್ತ
ಬೆನ್ನ ಹುರಿ ಬಿಗಿದಿತ್ತಣ್ಣ ಸೊಂಟದ ಬುಗುರಿ ತಿರಗತಿತ್ತ
ಬಿಗಿದಾ ಕಾಡ ಬಿಲ್ಲಿನಿಂದ
ಬಿಟ್ಟ ಬಾಣಧಾಂಗ ಚಿಮ್ಮಿ
ಹದ್ದು ಮೀರಿ ಹಾರಿ ಬಂದಿತ್ತಾ ॥

ನೆಲ ಒದ್ದು ಗುದ್ದ ತೋಡಿ ಗುದ್ದಿನ ಬದ್ದಿ ಒದ್ದಿಯಾಗಿ
ವರತಿ ನೀರು ಭರ್ತಿಯಾಗಿ ಹರಿಯೋ ಹಾಂಗ ಹೆಜ್ಜಿ ಹಾಕಿ
ಹತ್ತಿದವರ ಎತ್ತಿಕೊಂಡು
ಏಳಕೊಳ್ಳ ತಿಳ್ಳಿ ಆಡಿ
ಕಳ್ಳೆಮಳ್ಳೆ ಆಡಿಸಿ ಕೆಡವಿತ್ತ ॥

– ಡಾ. ಚಂದ್ರಶೇಖರ ಕಂಬಾರ

# ಕಟ್ಟುತ್ತೇವೆ


ಕಟ್ಟುತ್ತೇವೆ ನಾವು ಕಟ್ಟುತ್ತೇವೆ ನಾವು
ಕಟ್ಟೇ ಕಟ್ಟುತ್ತೇವ
ಒಡೆದ ಮನಸುಗಳ ಕಂಡ ಕನಸುಗಳ
ಕಟ್ಟೇ ಕಟ್ಟುತ್ತೇವ
ನಾವು ಕನಸ ಕಟ್ಟುತ್ತೇವ
ನಾವು ಮನಸ ಕಟ್ಟುತ್ತೇವ ॥ ಪ ॥

ಗೋಳಿಲ್ಲದ ಗುಂಡಿಲ್ಲದ ನಾಡ ಕಟುತ್ತೇವ
ನೂರು ಮನಸಿನ ಕೋಟಿ ಕನಸಿನ
ಹಾಡ ಬರಯುತ್ತೇವ
ಈ ನೆಲದ ಹಾಡ ಬರೆಯುತ್ತೇವ
ಈ ನೆಲದ ಹಾಡ ಬರೆಯುತ್ತೇವ ॥ ಪ ॥

ಜಾತಿ ಇಲ್ಲದ ಭೀತಿ ಇಲ್ಲದ ನಾಡ ಕಟ್ಟುತ್ತೇವ
ಕುಲವೆನ್ನಡ ಮನುಜ ಕುಲದ
ಹೊಸ ಹಾಡ ಬರೆಯುತ್ತೇವ
ಈ ನೆಲದ ಹಾಡ ಬರೆಯುತ್ತೇವ ॥ ಪ ॥

ಕ್ರಾಂತಿ ಕೆಂಡದ ಕುಂಡ ಹೊತ್ತು
ನಾವು ಮುಳ್ಳು ತುಳಿಯುತ್ತೇವ
ನಮ್ಮ ಬಾಳಿನ ರಕ್ತ ಗಾಲಿನ ಹಾಡ ಬರೆಯುತ್ತೇವ
ಈ ನೆಲದ  ಹಾಡ ಬರೆಯುತ್ತೇವ ॥ ಪ ॥

**– ಸತೀಶ್ ಕುಲಕರ್ಣಿ**



# ಜಜ್ಜಣಕು ಜಣಾರೆ

ಜಜ್ಜಣಕು ಜಣಾರೆ
ಜಣಕು ಜಣಕು ಜಣಾರೆ
ಜಜ್ಜಣಕು ಜಣಾರೆ
ಜಣಕು ಜಣಕು ಜಣಾರೆ

ಕೂಲಿ ಮಾಡೋರ್ ನಾವಣ್ಣ
ಕುಂತು ತಿನ್ನೋರ್ ನೀವಣ್ಣ 2 ॥ ಜಜ್ಜಣಕು ॥

ಎಮ್ಮೆ ಮೇಸೋರ್ ನಾವಣ್ಣ
ಹಾಲು ಮೊಸರು ನಿಮ್ದಣ್ಣ 2 ॥ ಜಜ್ಜಣಕು ॥

ಕಾಲಲ್ ನಡೆಯೋರ್ ನಾವಣ್ಣ
ಕಾರು ಜೀಪು ನಿಮ್ದಣ್ಣ 2 ॥ ಜಜ್ಜಣಕು ॥

ಮಳೆ ನೀರು ನಮ್ದಣ್ಣ
ಬಾಟ್ಲಿ ನೀರು ನಿಮ್ದಣ್ಣ 2 ॥ ಜಜ್ಜಣಕು ॥

ರಾಗಿ ಮುದ್ದೆ ನಮ್ದಣ್ಣ
ಫಿಜ್ಜಾ ಬರ್ಗರ್ ನಿಮ್ದಣ್ಣ 2 ॥ ಜಜ್ಜಣಕು ॥

ಜೋಳದ ರೊಟ್ಟಿ ನಮ್ದಣ್ಣ
ಇಡ್ಲಿ ದೋಸೆ ನಿಮ್ದಣ್ಣ 2 ॥ ಜಜ್ಜಣಕು ॥

– ಅನಾಮಿಕ

# ಮುದ್ದು ಮಾದಯ್ಯ

ಮೂರು ಕಣ್ಣಿನ ಮುಗಿಲು ಬಣ್ಣದ ಮುದ್ದು ಮಾದಯ್ಯ
ನೆತ್ತಿ ಮ್ಯಾಲೆ ನಾಗರ ಜಡೆ ನಲಿದು ಬಾರಯ್ಯ
ನಿಮ್ಮ ನೆತ್ತಿ ಮ್ಯಾಲೆ ನಾಗರ ಜಡೆ ನಲಿದು ಬಾರಯ್ಯ

ಕೂಗಿ ಕೂಗಿ ಕರೆದೆವಲ್ಲೋ ಕುಣಿಯುತ ಬಾರಯ್ಯ
ಕೂಗಿನ ದನಿಗೆ ನವಿಲಿನಂಗೆ ನಲಿದು ಬಾರಯ್ಯ
ನಮ್ಮ ಕೂಗಿನ ದನಿಗೆ ನವಿಲಿನಂಗೆ ನಲಿದು ಬಾರಯ್ಯ
ಮಲ್ಲಿಗೆ ಹೂವ ಮುಡಿದು ಬಾರೋ ಮಲೆಯ ಮಾದಯ್ಯ
ಮೆಲ್ಲ ಮೆಲ್ಲಗೆ ಪಾದಾನಿಟ್ಟು ಒಲಿದು ಬಾರಯ್ಯ
ನೀನು ಮೆಲ್ಲಮೆಲ್ಲಗೆ ಪಾದಾನಿಟ್ಟು ಒಲಿದು ಬಾರಯ್ಯ

ಕಂಬದ ಬೋಳಿ ಡಿಂಬದ ಮೇಲೆ ನಿಂತು ನೋಡಯ್ಯ
ಪಡುವಾಲ ಪರಿಶೆ ಬರುವ ಚೆಂದವ ನೋಡಯ್ಯ
ನಿಮ್ಮ ಪಡುವಾಲ ಪರಿಶೆ ಬರುವ ಚೆಂದವ ನೋಡಯ್ಯ
ಕರಿಯ ಕಂಬಳಿ ಗದ್ದುಗೆಯಿಂದ ಎದ್ದು ಬಾರಯ್ಯ
ಬಾರಿ ಬುರುಗನ ಏರಿಕೊಂಡು ಬೇಗನೆ ಬಾರಯ್ಯ ॥ ಮೂರು ॥

ಕಂಬದೋಕುಳಿ ಗಂಡ ನೀನು ಕೆಂಡಗಣ್ಣಯ್ಯ
ಕೆಂಡಕೊಂಡಕೆ ದಯಮಾಡೋ ದುಂಡು ಮಾದಯ್ಯ
ನೀನು ಕೆಂಡಕೊಂಡಕೆ ದಯಮಾಡೋ ದುಂಡು ಮಾದಯ್ಯ
ಬಾಣದಲ್ಲಿ ಮಿಂಚೊಡೆದಂಗೆ ಜಾಣ ಬಾರಯ್ಯ
ಪಶುಪತಿ ಪಂಚಬಾಣ ತೊಟ್ಟು ಬಾರಯ್ಯ ॥ ಮೂರು ॥

– ಜಾನಪದ

# ಗೊಂದಿ ಆಧುನೀಕರಣ ಯೋಜನೆಯ ಸಹಭಾಗಿಗಳು

ಮುಖ್ಯ ಇಂಜಿನಿಯರ್
**ಕರ್ನಾಟಕ ನೀರಾವರಿ ನಿಗಮ ನಿಯಮಿತ**
ಯೋಜನಾ ಅನುಷ್ಠಾನ ಕಛೇರಿ
ತುಂಗಾ ಮೇಲ್ದಂಡೆ ಯೋಜನೆ
ಶಿವಮೊಗ್ಗ – 577 201

ಆಡಳಿತಾಧಿಕಾರಿಗಳು
**ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ**
ಮಲವಗೊಪ್ಪ
ಶಿವಮೊಗ್ಗ 577222

ತಂಡದ ಉಪನಾಯಕರು
**ಸ್ಮೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್**
ನಂ 28, 1ನೇ ಅಡ್ಡರಸ್ತೆ ಬೀದಿ, ಗಾಂಧಿನಗರ
ಶಿವಮೊಗ್ಗ 577201

ಅಧ್ಯಕ್ಷರು
**ಗೊಂದಿ ಯೋಜನಾ ಮಟ್ಟದ ನೀರು ಬಳಕೆದಾರ ಸಹಕಾರ ಸಂಘಗಳ ಒಕ್ಕೂಟ**
ಮಿಲ್ಟ್ರಿಕ್ಯಾಂಪ್, ಭದ್ರಾವತಿ
ಶಿವಮೊಗ್ಗ ಜಿಲ್ಲೆ